ANANTHKUMAR PRATISHTHANA

# ಅನಂತಪಥ

ಪುಟ 10
ಕಲಬುರಗಿಯಲ್ಲಿ
ನಿತ್ಯ ಅನ್ನದಾನ



ಸಂಪುಟ - 5 | ಜುಲೈ - 2024 | ಸಂಚಿಕೆ - 49

# ವಿದ್ಯಾರ್ಥಿ ಚಳುವಳಿಗೆ ಹೊಸ ಸ್ವರೂಪ

- ಪ್ರೊ. ಪಿ. ವಿ. ಕೃಷ್ಣ ಭಟ್ಟ

## (ಜುಲೈ ೯, ೧೯೪೯ರಲ್ಲಿ ಸ್ಥಾಪನೆಯಾದ ವಿದ್ಯಾರ್ಥಿ ಪರಿಷತ್ತಿಗೆ ೭೫ ತುಂಬಿದ ಸಂದರ್ಭದಲ್ಲಿ ವಿಶೇಷ ಲೇಖನ)

ವಿದ್ಯಾರ್ಥಿ ಪರಿಷತ್ತಿನ ಕಾರ್ಯ ಚಟುವಟಿಕೆಗಳ ಭಾಗವಾಗಿ ರಾಜ್ಯದ ಬೇರೆ ಬೇರೆ ಪ್ರದೇಶಗಳಿಗೆ ೧೯೬೮ - ೬೯ ರಿಂದಲೇ ನಾನು ರಾಜ್ಯಾದ್ಯಂತ ಪ್ರವಾಸ ಮಾಡುತಿದ್ದೆ. ಈ ನಿಟ್ಟಿನಲ್ಲಿ ಹುಬ್ಬಳ್ಳಿಗೂ ಹೋಗುವ ಪ್ರಸಕ್ತಿ ಒದಗಿ ಬರುತ್ತಿತ್ತು. ಅಲ್ಲಿ ವೈದ್ಯಕೀಯ ಕಾಲೇಜಿನ ವಿರಾಗ್ ಗೋಖಲೆ ಮತ್ತು ಮಾಧವ ಜಿಗಜಿನ್ನಿ ಎಂಬ ಇಬ್ಬರು ವಿದ್ಯಾರ್ಥಿಗಳು ಪರಿಷತ್ತಿನ ಚಟುವಟಿಕೆಗಳನ್ನು ಪ್ರಾರಂಭ ಮಾಡಿದ್ದರು. ಈ ನಿಮಿತ್ತವಾಗಿಯೂ ನಾನು ಹುಬ್ಬಳ್ಳಿಗೆ ಹೋಗುತ್ತಿದ್ದೆ. ನಂತರ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಯಿತು. ನಾನು ಬಂಧನಕ್ಕೊಳಗಾದುದರಿಂದ ಹೊರಗೆ ನಡೆಯುತ್ತಿದ್ದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಸಾಧ್ಯವಾಗಲಿಲ್ಲ. ಆದರೆ ಆ ಸಂದರ್ಭದಲ್ಲಿ ವಿದ್ಯಾರ್ಥಿ ಸಮುದಾಯವು ಬೃಹತ್ ಪ್ರಮಾಣದಲ್ಲಿ ಹೋರಾಟದಲ್ಲಿ ತೊಡಗಿಕೊಂಡಿತ್ತು ಹಾಗೂ ಹುಬ್ಬಳ್ಳಿಯಲ್ಲಿ ಅನಂತಕುಮಾರ್ ಮತ್ತು ಅಚ್ಯುತ ಲಿಮಯೆ ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು ಎಂಬುದನ್ನು ನಾನು ಕೇಳಿಸಿಕೊಳ್ಳುತ್ತಿದ್ದೆ.



ವಿದ್ಯಾರ್ಥಿ ಪರಿಷತ್ತಿನ ಸಭೆಯೊಂದರಲ್ಲಿ ಶ್ರೀ ಅನಂತಕುಮಾರ್ (ಬಲತುದಿ) ಮತ್ತು ಪ್ರೊ. ಪಿ.ವಿ. ಕೃಷ್ಣಭಟ್ಟರು (ಎಡದಿಂದ ಮೂರನೆಯವರು)

ಬಹುಶಃ ಅನಂತಕುಮಾರ್ ಆಗಿನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದರು ಎಂದು ಕಾಣಿಸುತ್ತದೆ. ಆ ಎಳೆಯ ವಯಸ್ಸಿನಲ್ಲಿಯೇ ಅವರು ಸಾಕಷ್ಟು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಅವರಲ್ಲಿ ನೇತೃತ್ವದ ಗುಣ ಆಗಿನಿಂದಲೇ ಪ್ರಕಟಗೊಳ್ಳುತ್ತಿತ್ತು. ತುರ್ತು ಪರಿಸ್ಥಿತಿ ಕಳೆದ ನಂತರ ನಾನು ಮತ್ತೆ ಹುಬ್ಬಳ್ಳಿಗೆ ಹೋಗಲಾರಂಭಿಸಿದೆ. ಅಚ್ಯುತ ಲಿಮಯೆ, ಅನಂತಕುಮಾರ್, ವ್ಯಾಸ ದೇಶಪಾಂಡೆ, ವಿಷ್ಣುಕಾಂತ ಚಟಪಲ್ಲಿ ಮುಂತಾದವರು ಅಂದಿನ ದಿನಗಳಲ್ಲಿ ವಿದ್ಯಾರ್ಥಿ ಪರಿಷತ್ತಿನ ಪ್ರಮುಖ ಕಾರ್ಯಕರ್ತರಾಗಿದ್ದರು. ಇನ್ನೊಂದು ಮುಖ್ಯವಾದ ಹೆಸರು ಅನಿಲ್ ಸಹಸ್ರಬುದ್ಧೆ. ಇವರು ಮುಂದೆ ಎಐಸಿಟಿಇ ನಿರ್ದೇಶಕರಾದರು. ಇದೀಗ ಕೇಂದ್ರ ಸರಕಾರದ ಪ್ರಮುಖ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರೂ ಬಹಳ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದರು. ಹೀಗೆ ಪ್ರಮುಖ ಪ್ರತಿಭಾವಂತ ವಿದ್ಯಾರ್ಥಿಗಳ ಒಂದು ತಂಡ ಆ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ತಿನಲ್ಲಿ ರೂಪುಗೊಂಡಿತು. ಆ ದಿನಗಳಲ್ಲಿ ಮುಂಬಯಿಯಲ್ಲಿ ನಡೆದ ಒಂದು ಬೈಠಕ್ಕಿನಲ್ಲಿ ಮುಂದಿನ ರಾಷ್ಟ್ರೀಯ ಸಮ್ಮೇಳನವನ್ನು ಕರ್ನಾಟಕದಲ್ಲಿ ನಡೆಸಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಬೆಂಗಳೂರಿನಲ್ಲಿ ಈಗಾಗಲೇ ಎರಡು ಬಾರಿ ಸಮ್ಮೇಳನವನ್ನು ನಡೆಸಿರುವುದರಿಂದ ಈ ಸಮ್ಮೇಳನವನ್ನು ಕರ್ನಾಟಕದ ಎರಡನೇ ದೊಡ್ಡ ನಗರವಾದ ಹುಬ್ಬಳ್ಳಿಯಲ್ಲಿ ನಡೆಸುವುದೆಂದು ನಿರ್ಧರಿಸಲಾಯಿತು. ಹುಬ್ಬಳ್ಳಿಯಲ್ಲಿ ಕಾಲೇಜಿನ ಮೊದಲನೇ ಮತ್ತು ಎರಡನೇ ವರ್ಷದಲ್ಲಿ ಹಾಗೂ ಪಿಯುಸಿ ಓದುತ್ತಿದ್ದ ಕಿರಿಯ

ಪುಟ 4 ರಲ್ಲಿ ಮುಂದುವರಿದಿದೆ



## ಶ್ರೀಮತಿ ತೇಜಸ್ವಿನಿ ಅನಂತಕುಮಾರರಿಗೆ ಡಾ. ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಬೆಂಗಳೂರಿನ ಡಾ.ಫ.ಗು. ಹಳಕಟ್ಟಿ ಪ್ರತಿಷ್ಠಾನವು ಸಮಾಜದ ವಿಶಿಷ್ಟ ಸಾಧಕರಿಗೆ ಪ್ರತಿ ವರ್ಷವೂ ಹಳಕಟ್ಟಿ ಅವರ ಜನ್ಮದಿನದಂದು 'ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ'ಯನ್ನು ಘೋಷಿಸಿ, ಪ್ರದಾನ ಮಾಡುತ್ತಿದೆ.

ಅದರಂತೆ, ಸಮಾಜಸೇವಾ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಬೆಂಗಳೂರಿನ ಕುಮಾರ ಕೃಪಾ ರಸ್ತೆಯಲ್ಲಿರುವ ಗಾಂಧಿಭವನದಲ್ಲಿ 2024ರ ಜುಲೈ 2 ರಂದು ಡಾ. ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಅಲ್ಲದೇ, ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೂ, ಶೈಕ್ಷಣಿಕ ಸೇವೆಗಾಗಿ ಕೆಎಲ್‌ಇ ಸೊಸೈಟಿ ಅಧ್ಯಕ್ಷ ಡಾ. ಪ್ರಭಾಕರ ಕೋರೆ ಅವರಿಗೂ ಡಾ. ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಯಿತು. ಎಲ್ಲ ಪ್ರಶಸ್ತಿ ಪುರಸ್ಕೃತರನ್ನು ತಲಾ 1 ಲಕ್ಷ ರೂ. ಗೌರವಧನದೊಂದಿಗೆ ಸನ್ಮಾನಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ವಚನಗಳನ್ನು ಸಂಶೋಧಿಸಿ, ಪರಿಷ್ಕರಿಸಿ, ಅಧ್ಯಯನಯೋಗ್ಯವನ್ನಾಗಿಸಿದ ಡಾ. ಫ.ಗು. ಹಳಕಟ್ಟಿಯವರ ಅವಿರತ ಪ್ರಯತ್ನವು ಕನ್ನಡ ಸಾಹಿತ್ಯಕ್ಕೆ ನೀಡಿದ ಮಹತ್ವದ ಸಾಧನೆಯಾಗಿದೆ. ವಚನ ಸಾಹಿತ್ಯಕ್ಕೆ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುತ್ತಿರುವ ಡಾ. ಫ.ಗು. ಹಳಕಟ್ಟಿ ಪ್ರತಿಷ್ಠಾನದ ಸೇವೆಯು ಪ್ರಶಂಸನೀಯ ಎಂದರು. ಅದಮ್ಯ ಚೇತನದ ಮೂಲಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಹಾಗೂ ಸಾರ್ವಜನಿಕರಿಗೆ ಉಚಿತ ಊಟ ವಿತರಿಸುತ್ತಿರುವ ಸೇವೆಗಾಗಿ ನನಗೆ ಪ್ರತಿಷ್ಠಾನವು ಡಾ. ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದ್ದು, ನನಗೆ ಅತೀವ ಆನಂದ ನೀಡಿದೆ. ಈ ಪುರಸ್ಕಾರಕ್ಕಾಗಿ ಪ್ರತಿಷ್ಠಾನವನ್ನು ಅಭಿವಂದಿಸುತ್ತೇನೆ.

ನಮ್ಮ ತಂದೆ-ತಾಯಿ, ಅಜ್ಜ-ಅಜ್ಜಿ-ಅತ್ತೆಯವರ ನಡೆ-ನುಡಿಗಳಲ್ಲಿ ಸಮಾಜ ಸೇವೆಯು ಸಹಜ ಗುಣವಾಗಿತ್ತು. ಅವಕಾಶ ಸಿಕ್ಕಾಗೆಲ್ಲ ಬೇರೆಯವರಿಗೆ ಸಹಾಯ ಮಾಡಬೇಕು, "ಥಿಂಕ್ ಗ್ಲೋಬಲಿ; ಆಕ್ಟ್ ಲೋಕಲಿ" ಎಂದು ನನ್ನ ಪತಿ ಅನಂತಕುಮಾರರು ಹೇಳುತ್ತಿದ್ದ ಮಾತು ನನಗೆ ಪ್ರೇರಣೆಯಾಗಿತ್ತು. ಈ ಎಲ್ಲದರ ಸ್ಫೂರ್ತಿಯಾಗಿ ಅದಮ್ಯ ಚೇತನದ ಪಾಕಶಾಲೆಯನ್ನು ಶೂನ್ಯಕಸದ ಪರಿಸರ ಸ್ನೇಹಿ ಮಾದರಿಯ ಪಾಠಶಾಲೆಯನ್ನಾಗಿ ಮಾಡಲು ಸಾಧ್ಯವಾಗಿದೆ ಎಂದರು.

ರಾಜ್ಯ ಪ್ರವಾಸೋದ್ಯಮ ಖಾತೆ ಸಚಿವ ಶ್ರೀ ಎಚ್.ಕೆ. ಪಾಟೀಲ್ ಅವರು ಸಮಾರಂಭವನ್ನು ಉದ್ಘಾಟಿಸಿ, ಪ್ರಶಸ್ತಿಗಳನ್ನು ವಿತರಿಸಿದರು. ಫೌಂಡೇಶನ್ ಟ್ರಸ್ಟಿ, ಶ್ರೀಮತಿ ಶೀಲಾ ಹಳಕಟ್ಟಿ, ವ್ಯವಸ್ಥಾಪಕ ಟ್ರಸ್ಟಿ ಪವಿತ್ರಾ ಹಳಕಟ್ಟಿ ಹಾಗೂ ನಾಡೋಜ ಡಾ. ಮನು ಬಳಿಗಾರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ◆

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್

# ಮೂಗೂರಿನ ದೇವಾಲಯಗಳು





ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಮೂಗೂರು ಹಲವು ಪುರಾತನ ದೇವಾಲಯಗಳಿರುವ ಪ್ರಸಿದ್ಧ ಕ್ಷೇತ್ರ. ಮೈಸೂರಿನಿಂದ ೪೩ ಕಿ.ಮೀ. ದೂರವಿರುವ ಮೂಗೂರನ್ನು ತಾಲ್ಲೂಕು ಕೇಂದ್ರವಾದ ಟಿ. ನರಸೀಪುರದಿಂದ ಹದಿನೇಳು ಕಿಮೀ ದೂರ ಕ್ರಮಿಸಿ ತಲುಪಬಹುದು.

ಹೊಯ್ಸಳ ಸಾಮ್ರಾಜ್ಯದ ಹಿರಿಯನಾಡಿಗೆ ಸೇರಿದ ಮೋಗೂರು ಎಂಬ ಹೆಸರಿನಿಂದ ಇತಿಹಾಸದಲ್ಲಿ ದಾಖಲಾಗಿರುವ ಈ ಊರಿನ ಬಗ್ಗೆ ಹತ್ತನೆಯ ಶತಮಾನದಿಂದಲೂ ಶಾಸನಗಳಲ್ಲಿ ಉಲ್ಲೇಖವಿದೆ. ಇಲ್ಲಿನ ತ್ರಿಪುರಸುಂದರಿ ದೇವಾಲಯ ನಾಡಿನ ಪ್ರಸಿದ್ಧದೇಗುಲಗಳಲ್ಲೊಂದು. ತಿಬ್ಬಾದೇವಿ ಎಂಬ ಹೆಸರಿನಿಂದಲೂ ಪರಿಚಿತಳಾಗಿರುವ ಈ ದೇವತೆಯು ಶಂಖಚಕ್ರಧಾರಿಣಿಯಾಗಿದ್ದು, ಸಪ್ತಮಾತೃಕೆಯರಲ್ಲೊಬ್ಬಳಾದ ವೈಷ್ಣವಿಯ ರೂಪವೆಂದು ಭಾವಿಸಲಾಗಿದೆ. ಹದಿಮೂರನೆಯ ಶತಮಾನದ ಹೊಯ್ಸಳ ವೀರನರಸಿಂಹನ ಕಾಲದಲ್ಲೂ ಮುಂದೆ ವಿಜಯನಗರ ಮತ್ತು ಮೈಸೂರು ಅರಸರಿಂದಲೂ ಈ ದೇಗುಲದ ಜೀರ್ಣೋದ್ಧಾರ ನಡೆದಿದೆ. ನವರಂಗ, ಮುಖಮಂಟಪ, ಪ್ರಾಕಾರಗಳೆಲ್ಲ ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡವು. ಮೈಸೂರು ಅರಸರ ಕಾಲದಲ್ಲಿ ಗಾರೆಗಚ್ಚಿನ ಕೈಪಿಡಿ ಹಾಗೂ ಗಾರೆಯ ವಿಗ್ರಹಗಳನ್ನು ನಿರ್ಮಿಸಲಾಯಿತು.

ಬಾಬಾ ಸಾಹೇಬ ಖಾನನೆಂಬ ಪಾಳೆಯಗಾರನು ದೇವಿಯ ಮಹಿಮೆಯಿಂದ ಪ್ರಭಾವಿತನಾಗಿ ಈ ದೇವಾಲಯವನ್ನು ಕಟ್ಟಿಸಿದನೆಂಬ ಇನ್ನೊಂದು ಪ್ರತೀತಿಯೂ ಇದೆ. ದೇವಾಲಯದ ಮುಂಭಾಗವೂ, ಎದುರಿಗಿರುವ ಚಿತ್ರ ಮಂಟಪವೂ ಇಸ್ಲಾಮಿಕ್ ಶೈಲಿಯಲ್ಲಿರುವುದೂ ಈ ಐತಿಹ್ಯಕ್ಕೆ ಆಧಾರವಾಗಿದೆ.

ಇಷ್ಟೇ ಪುರಾತನವಾದ ಇನ್ನೂ ಹಲವು ಗುಡಿಗಳನ್ನು ಮೂಗೂರಿನಲ್ಲಿ ಕಾಣಬಹುದಾಗಿದ್ದು, ಅವುಗಳಲ್ಲಿ ಎಲ್ಲಕ್ಕಿಂತ ದೊಡ್ಡದಾದ ದೇಗುಲವೆಂದರೆ ದೇಶೇಶ್ವರ ದೇವಾಲಯ. ಪ್ರಾಯಶಃ ಚೋಳರ ಕಾಲದಲ್ಲಿ ಕಟ್ಟಲಾದ ಶಿವನ ಗುಡಿಯನ್ನು ಹದಿಮೂರನೆಯ ಶತಮಾನದಲ್ಲಿ ಹೊಯ್ಸಳ ಅರಸನಾಗಿದ್ದ ಮೂರನೆಯ ನರಸಿಂಹನು ವಿಸ್ತರಿಸಿ ದೊಡ್ಡದೇವಾಲಯ ಸಂಕೀರ್ಣವಾಗಿ ಮಾರ್ಪಡಿಸಿದನಂತೆ. ನರಸಿಂಹನ ಅಧಿಕಾರಿಯಾದ ಸಂಕಣ್ಣನೆಂಬುವನು ಈ ದೇವಾಲಯವನ್ನು ನಿರ್ಮಿಸಿ ಹೊಸ ಅಗ್ರಹಾರವೊಂದನ್ನು ಕಟ್ಟಿಸಿದನೆಂದು ೧೨೭೭ರಲ್ಲಿ ಬರೆಯಿಸಿದ ದೊಡ್ಡಶಾಸನದಲ್ಲಿ ಹೇಳಲಾಗಿದೆ. ಅಲ್ಲದೆ, ಮೋಗೂರನ್ನು ಮಾರುಕಟ್ಟೆಯ ಪಟ್ಟಣವಾಗಿ ಪರಿವರ್ತಿಸಿ ಸಂತೆಜಾತ್ರೆಗಳನ್ನು ನಡೆಸಲು ಅನುಮತಿಸಿದ ವಿವರಗಳಿವೆ. ದೊಡ್ಡದೊಂದು ಧ್ವಜಸ್ತಂಭದೆದುರಿಗೆ ವಿಜಯನಗರದ ಕಾಲದಲ್ಲಿ ನಿರ್ಮಿಸಿದ ರಾಜಗೋಪುರವು ದೇಶೇಶ್ವರ ದೇಗುಲಕ್ಕೆ ನಿಮ್ಮನ್ನು ಸ್ವಾಗತಿಸುತ್ತದೆ.



ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಹೂಬಳ್ಳಿಗಳನ್ನು ಆಧರಿಸಿ ನಿಂತ ಶಿಲಾಸುಂದರಿಯರು. ಅಲ್ಲಿಯೇ ಕಂಬಕ್ಕೆ ಒರಗಿ ಕೈಮುಗಿದು ನಿಂತ ರಾಜಪ್ರಮುಖನು ಈ ಗುಡಿಯ ನಿರ್ಮಾತೃವಾದ ಸಂಕಣ್ಣನಿರಬಹುದು. ದೇಗುಲದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ಸೂರ್ಯ, ವಿಷ್ಣು, ಸಪ್ತಮಾತೃಕೆಯರೇ ಮೊದಲಾದ ದೇವತೆಗಳ ವಿಗ್ರಹಗಳಿವೆ. ಇವು ಗಂಗರ ಕಾಲದ ಶಿಲ್ಪಗಳೆಂದು ತೋರುತ್ತವೆ. ಇವುಗಳಲ್ಲದೆ, ನವರಂಗದಲ್ಲಿ ಕಂಡುಬರುವ ವಿಗ್ರಹಗಳಲ್ಲಿ ಕಾಲಭೈರವನ ಶಿಲ್ಪವು ಸೊಗಸಾಗಿದೆ. ಸೂಕ್ಷ್ಮಕೆತ್ತನೆಗಳನ್ನುಳ್ಳ ಕಾಲಭೈರವನ ವಿಗ್ರಹವು ಹೊಯ್ಸಳಶಿಲ್ಪದ ಉತ್ತಮ ಮಾದರಿಗಳಲ್ಲೊಂದು. ತ್ರಿಭಂಗಿಯಲ್ಲಿ ನಿಂತ ಭೈರವನ ಕೊರಳಿಗೆ ಸರ್ಪದ ಆಭರಣ. ಸುತ್ತಲಿನ ಪ್ರಭಾವಳಿಯಲ್ಲಿ ಮಕರಗಳೂ ಗಣದೇವತೆಗಳೂ ಕಂಡುಬರುತ್ತವೆ. ಸಪ್ತಮಾತೃಕೆಯರನ್ನು ಅವರವರ ವಾಹನಗಳೊಡನೆ ಚಿತ್ರಿಸಿರುವುದು ಗಮನಾರ್ಹ. ದ್ವಿಭುಜಗಳಿಂದ ಕೂಡಿದ ಸೂರ್ಯನ ವಿಗ್ರಹವು ಚಿಕ್ಕದಾಗಿದ್ದರೂ ಗಮನಸೆಳೆಯುತ್ತದೆ. ಎರಡೂ ಕೈಗಳಲ್ಲಿ ಕಮಲವನ್ನು ಧರಿಸಿದ ಸೂರ್ಯನ ಕಿರೀಟವು ಕೊಳಗದ ಆಕಾರದಲ್ಲಿದೆ. ಚಕ್ರ, ಶಂಖ, ಗದಾಧಾರಿಯಾದ ವಿಷ್ಣುವಿನ ಬಿಂಬವನ್ನು ದೊಡ್ಡಶಿಲೆಯ ಮೇಲೆ ಕೆತ್ತಲಾಗಿದೆ. ಆಯುಧಗಳಲ್ಲದೆ, ಯಜ್ಞೋಪವೀತ, ಕಂಕಣಗಳನ್ನು ಮಾತ್ರವೇ ಧರಿಸಿರುವಂತೆ ಕೆತ್ತಿರುವ ಈ ಸರಳಶಿಲ್ಪವೂ ಸೂರ್ಯನ ವಿಗ್ರಹವೂ ಪ್ರಾಚೀನತೆಯ ದೃಷ್ಟಿಯಿಂದ ಮಹತ್ವ ಪಡೆದಿವೆ. ಇಲ್ಲಿಯೇ ಇರಿಸಿರುವ ನೀಳಸೊಂಡಿಲಿನ ಗಣಪತಿಯ ವಿಗ್ರಹವೊಂದು ಮುದ್ದಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಅದಕ್ಕೆ ಅಭಿಮುಖವಾಗಿ ಚಿಕ್ಕದೊಂದು ನಂದಿಯಿದೆ. ದೇಗುಲದ ಹೊರಗಿನ ಮಂಟಪದಲ್ಲಿರುವ ಸಾಲಂಕೃತ ನಂದಿಯು ಆಕಾರದಲ್ಲಿ ತೀರಾ ದೊಡ್ಡದಲ್ಲವಾದರೂ ಆಕರ್ಷಕವಾಗಿದೆ. ಗುಡಿಯ ಪ್ರವೇಶದ್ವಾರವನ್ನು ಮರದಿಂದ ಮಾಡಿದ್ದು ಅದರ ಮೇಲಿನ ಶಿಲ್ಪಗಳು ಗಮನಿಸತಕ್ಕವು. ನಂದಿ, ಶಿವಲಿಂಗ, ಋಷಿಗಳಲ್ಲದೆ ಹಲವು ಮಿಥುನಶಿಲ್ಪಗಳನ್ನೂ ಇಲ್ಲಿ ಕಾಣಬಹುದು. ಅಮ್ಮನವರ ಗುಡಿಯ ಬಾಗಿಲಲ್ಲಿ ಟಗರುಕಾಳಗ, ಆನೆಯ ಮೇಲೆ ಹೊರಟ ರಾಜಪ್ರಮುಖರು, ಹುಲಿಯೊಡನೆ ಹೋರಾಟ ಮೊದಲಾದವನ್ನು ಚಿತ್ರಿಸಿರುವುದು ಸ್ವಾರಸ್ಯಕರವಾಗಿದೆ. ದೇವಾಲಯದ ಪ್ರಾಕಾರದಲ್ಲಿ ಆಂಜನೇಯ, ಚಂಡಿಕೇಶ್ವರ ಮೊದಲಾದ ದೇವತೆಗಳ ಚಿಕ್ಕ ಗುಡಿಗಳೂ ಇವೆ.



ಮೂಗೂರಿನಲ್ಲಿರುವ ಇತರ ಪ್ರಾಚೀನಗುಡಿಗಳಲ್ಲಿ ವೃಷಭನಾಥನ ಬಸದಿ, ನಾರಾಯಣ ದೇವಾಲಯ, ವೀರಭದ್ರಗುಡಿಗಳು ಸೇರಿವೆ. ಮೂಗೂರಿಗೆ ಬರುವವರು ಸಮೀಪದ ಟಿ.ನರಸೀಪುರದ ಗುಂಜಾನರಸಿಂಹ ದೇವಾಲಯವನ್ನೂ ಮುಂದೆ ಕೆಲವೇ ಕಿಲೋಮೀಟರುಗಳ ಅಂತರದಲ್ಲಿರುವ ತಿರುಮಕೂಡಲು, ಸೋಸಲೆ, ಶ್ರೀರಂಗರಾಜಪುರ, ಹಾಗೂ ಸೋಮನಾಥಪುರಗಳನ್ನೂ ನೋಡಿಕೊಂಡು ಬರಲು ಅವಕಾಶವಿದೆ. **(ಸೌಜನ್ಯಃ ಆಕಾಶವಾಣಿ, ಮೈಸೂರು)** ◆





# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

## ಅಧ್ಯಾಯ-25 ನಾಲ್ಕಾಣೆಯ ಚಿತ್ರಗೀತೆ



ಎಂ.ಟಿ.ಎಸ್. ಕಾಲೊನಿಯಲ್ಲಿ ಅನಂತ ಕುಮಾರನ ಒಡನಾಡಿಗಳಾಗಿದ್ದ ಸಮವಯಸ್ಕ ಮಕ್ಕಳೆಲ್ಲ ಪ್ರಾಥಮಿಕ ಶಾಲೆಯಲ್ಲಾಗಲಿ ಪ್ರೌಢಶಾಲೆಯಲ್ಲಾಗಲಿ ಅವನ ಸಹಪಾಠಿಗಳೇನೂ ಆಗಿರಲಿಲ್ಲ. ಅವರವರ ಅನುಕೂಲ, ಆಯ್ಕೆ, ಪೋಷಕರ ಇಚ್ಛಾನುಸಾರ ಹುಬ್ಬಳ್ಳಿಯ ವಿಭಿನ್ನ ಭಾಗಗಳಲ್ಲಿದ್ದ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲೋ ಆಂಗ್ಲ ಮಾಧ್ಯಮದಲ್ಲೋ ಅಭ್ಯಾಸಮಾಡುತ್ತಿದ್ದರು. ಎಸ್.ಎಸ್.ಎಲ್.ಸಿ. ಮುಗಿಸಿ ಅನಂತಕುಮಾರ ವಿಜ್ಞಾನವಿಷಯವನ್ನು ಆಯ್ದುಕೊಂಡು ಪಿ.ಸಿ. ಜಾಬಿನ್ ಕಾಲೇಜಿಗೆ ಸೇರಿದಾಗ ಆತನ ಸಹಪಾಠಿಗಳಾಗಿದ್ದವರಲ್ಲಿ ಎಂ.ಟಿ.ಎಸ್. ಕಾಲೊನಿಯ ಅರುಣ್ ಗಲಗಲಿ, ಶರದ್ ದೇಶಪಾಂಡೆಯವರೂ ಇದ್ದರು.

ಈ ಕಾಲೇಜು ಹುಡುಗರಿಗೆ ಪ್ರತಿದಿನ ಸಿಟಿಬಸ್ಸಿನಲ್ಲಿ ಹೋಗುವುದಕ್ಕಾಗಿ ಅವರವರ ಮನೆಗಳಲ್ಲಿ ತಲಾ ನಾಲ್ಕಾಣೆ ಕೊಡುತ್ತಿದ್ದರು. ನಡೆದೇ ಹೋದರೆ ಈ ನಾಲ್ಕಾಣೆ ಉಳಿಸಬಹುದಲ್ಲ ಎಂಬ ಯೋಚನೆ ಹುಡುಗರಿಗೆ. ಹೀಗೆ ಗೆಳೆಯರೊಡನೆ ನಡೆಯುವಾಗ ಸ್ವಚ್ಛಂದವಿಹಾರದ ಸಂತೋಷ ಬೇರೆಲ್ಲಿ ಸಿಕ್ಕೀತು?

ಆ ಕಾಲದಲ್ಲಂತೂ ಹುಬ್ಬಳ್ಳಿ ಈಗಿನಂತೆ ಕಟ್ಟಡಗಳಿಂದ ಕಿಕ್ಕಿರಿದಿರಲಿಲ್ಲ. ರಸ್ತೆಯಲ್ಲಿ ತಿರುಗುವ ಜನರೂ ಹೆಚ್ಚಿರಲಿಲ್ಲ. ಕಾಲೇಜಿಗೆ ಹೊರಟ ಹುಡುಗರು ದಾರಿಯಲ್ಲಿ ವಿದ್ಯುತ್ ಕಂಬಕ್ಕೋ ಮತ್ತಾವ ಲಕ್ಷ್ಯದೆಡೆಗೋ ಕಲ್ಲು ಬೀಸುತ್ತ ಗುರಿಪರೀಕ್ಷೆ ಮಾಡುವರು. ಹಾದಿಯಲ್ಲಿ ಸಿಗುವ ಶಿರೂರ್ ಪಾರ್ಕಿನಲ್ಲಿ ದ್ರಾಕ್ಷಿ ತೋಟವಿದ್ದಿತು. ಅಲ್ಲೊಂದಿಷ್ಟು ದ್ರಾಕ್ಷಿ ಕದ್ದು ಕಿತ್ತು ತಿನ್ನುತ್ತ ಸಾಗುವರು. ಮೊದಲ ಒಂದೆರಡು ದಿನ ಈ ಹುಡುಗರನ್ನು ಕಾವಲಿನವರು ಗದರಿಸಿ ಅಟ್ಟಲು ಯತ್ನಿಸಿದ್ದುಂಟು. ಯಾವ ಬೇಸರವೂ ಇಲ್ಲದೆ ಇವರು ಪದೇ ಪದೇ ತೋಟಕ್ಕೆ ಬರುವುದನ್ನು ಕಂಡ ಅವರಿಗೆ ಏನೆನ್ನಿಸಿತೋ, ತೋಟಕ್ಕೆ ನುಗ್ಗಿದವರನ್ನು ಅಟ್ಟಲು ಬಂದವರು 'ಓ ನೀವಾ?' ಎಂದು ಪರಿಚಯದ ಸಲುಗೆ ತೋರಿಸಿ ಸುಮ್ಮನಾಗುವರು.

ಬಸ್ಸಿಗೆಂದು ಅಪ್ಪ ಕೊಟ್ಟ ನಾಲ್ಕಾಣೆಯು ಸದುಪಯೋಗವಾಗುತ್ತಿದ್ದುದು ಕಾಲೇಜಿನಿಂದ ಹಿಂತಿರುಗುವ ಹಾದಿಯಲ್ಲಿನ ಹೋಟೆಲಿನಲ್ಲಿ. ಗೆಳೆಯರ ಕೈಯಲ್ಲಿದ್ದ ಹಣವನ್ನು ಒಟ್ಟುಗೂಡಿಸಿ ಒಂದಷ್ಟು ತಿಂಡಿ ತಿನ್ನುವರು. ಉಳಿದ ನಾಲ್ಕಾಣೆ ಜೂಕ್ ಬಾಕ್ಸಿಗೆ ವಿನಿಯೋಗವಾಗುವುದು.

ಜೂಕ್ ಬಾಕ್ಸ್ ಎನ್ನುವುದೊಂದು ಹಾಡುಪೆಟ್ಟಿಗೆ. ಹಿಂದೆಲ್ಲ ತಮಗಿಷ್ಟವಾದ ಸಿನಿಮಾ ಹಾಡುಗಳನ್ನು ಬೇಕೆಂದಾಗ ಕೇಳಲು ಅವಕಾಶವಿರಲಿಲ್ಲ. ರೇಡಿಯೋದಲ್ಲಿ ಶ್ರೋತೃಗಳ ಕೋರಿಕೆಯ ಮೇರೆಗೆ ಆ ಹಾಡು ಪ್ರಸಾರವಾಗುವುದನ್ನೋ, ಸಿಲೋನ್ ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ ಬಿನಾಕಾ ಗೀತ್ ಮಾಲಾದಂತಹ ಜನಪ್ರಿಯ ಕಾರ್ಯಕ್ರಮದ ಪ್ರಸಾರವನ್ನೋ ನಿರೀಕ್ಷಿಸಿಕೊಂಡಿರಬೇಕಿತ್ತು. ಹೋಟೆಲಿನಲ್ಲಿಟ್ಟಿದ್ದ ಜೂಕ್ ಬಾಕ್ಸಿನಲ್ಲಾದರೆ ಧ್ವನಿಮುದ್ರಿತ ಹಾಡುಗಳಿರುತ್ತಿದ್ದವು. ನಾಲ್ಕಾಣೆ ಕೊಟ್ಟು ತಮಗಿಷ್ಟವಾದ ಮೂರು ಹಾಡುಗಳನ್ನು ಕೇಳಬಹುದಾಗಿತ್ತು. ಅನಂತಕುಮಾರ, ಗಲಗಲಿ ಮತ್ತು ಶರದ್ ದೇಶಪಾಂಡೆ ತಮ್ಮ ಆಯ್ಕೆಯ ಒಂದೊಂದು ಹಾಡು ಹಾಡಿಸಿ ಕೇಳಿ ಸಂತೋಷಪಡುವರು. ಹಾಡಿನ ಆಯ್ಕೆಯಲ್ಲಿ ಒಮ್ಮತ ಏರ್ಪಡದಿದ್ದಾಗ ಹೋಟೆಲ್ ಮಾಲಿಕನಿಗೇ ಅವನಿಷ್ಟ ಬಂದ ಹಾಡು ಹಾಕುವಂತೆ ಹೇಳಿ ನಾಲ್ಕಾಣೆ ಖರ್ಚಾಗುವವರೆಗೆ ಹೋಟೆಲಿನಲ್ಲಿ ಕುಳಿತಿದ್ದು ಎದ್ದು ಹೊರಡುವರು. ಕಾಲೇಜು ವ್ಯಾಸಂಗದ ಮೊದಲ ದಿನಗಳಲ್ಲಿ ಸಹವಾಸ ದೋಷದ ಪರಿಣಾಮಗಳೂ ಇದ್ದವು. ಇವುಗಳಲ್ಲಿ ಹೊಸದಾಗಿ ಬೋಧಕವೃತ್ತಿಗೆ ಸೇರಿದ ಉಪನ್ಯಾಸಕರ ಸತ್ವಪರೀಕ್ಷೆಯೂ ಸೇರಿತ್ತು. ಹೀಗೆಂದರೆ ತರಗತಿಯಲ್ಲಿ ಕೆಟ್ಟಚೇಷ್ಟೆ ಮಾಡುವುದೆಂದು ಅರ್ಥವಲ್ಲ. ಏನೋ ಅಡ್ಡಪ್ರಶ್ನೆ ಕೇಳಿ ಶಿಕ್ಷಕರನ್ನು ಸತಾಯಿಸುವುದು. ರಸಾಯನಶಾಸ್ತ್ರ ತರಗತಿಯಲ್ಲಾದರೆ, ಉಪನ್ಯಾಸಕರು ಯಾವುದೋ ಒಂದು ರಾಸಾಯನಿಕದ ಪರಿಣಾಮವನ್ನು ವಿವರಿಸುತ್ತಿದ್ದರೆ ಗಲಗಲಿಯೋ, ಅನಂತನೋ, ಆ ರಾಸಾಯನಿಕದ ಬದಲು ಬೇರೊಂದು ಆಸಿಡ್ ಸೇರಿಸಿದರೆ ಏನಾಗುತ್ತದೆ, ಅದರ ಬದಲು ಇನ್ನು ಯಾವುದನ್ನೋ ಸೇರಿಸಿದರೆ ಆಗುವುದೇನು ಎಂಬಂತಹ ಅಸಂಬದ್ಧ ಪ್ರಶ್ನೆ ಕೇಳುವರು. ಪಾಠದ ದಿಕ್ಕು ತಪ್ಪಿಸುವುದೇ ಈ ಕುಚೋದ್ಯದ ಉದ್ದೇಶ ಎಂದು ಗೊತ್ತಿದ್ದರೂ ಅಧ್ಯಾಪಕರು ಸುಮ್ಮನಾಗುವರು.

ಆದರೆ ಈ ಶಿಷ್ಯೋತ್ತಮರ ಸವಾಲುಗಳಿಂದ ಪಾರಾಗಲು ಹೊಸದಾಗಿ ನೇಮಕಗೊಂಡ ಸಂಸ್ಕೃತ ಅಧ್ಯಾಪಕ, ಹೆಗಡೆಯವರು ಬೇರೆಯೇ ಉಪಾಯಹೂಡಿದರು. ಸಂಸ್ಕೃತದ ಸಾಕಷ್ಟು ಪೂರ್ವಪರಿಚಯವಿದ್ದ ಈ ತ್ರಿಮೂರ್ತಿಗಳು ಹೆಗಡೆಯವರಿಗೆ ಸಂಸ್ಕೃತದಲ್ಲೇ ಏನೇನೋ ಪ್ರಶ್ನೆ ಕೇಳುತ್ತ ತರಗತಿಯ ದಿಕ್ಕು ತಪ್ಪಿಸುವುದು ನಡೆದಿತ್ತು. ಅನಂತ, ಗಲಗಲಿ ಮತ್ತು ದೇಶಪಾಂಡೆಯವರನ್ನು ತಮ್ಮ ಕೊಠಡಿಗೆ ಕರೆಸಿಕೊಂಡ ಹೆಗಡೆಯವರು ಆ ಮೂವರೂ ಸಂಸ್ಕೃತವನ್ನು ಸಾಕಷ್ಟು ಕಲಿತವರಾದುದರಿಂದ ಇನ್ನು ಮುಂದೆ ತರಗತಿಗೆ ಹಾಜರಾಗುವುದರಿಂದ ವಿನಾಯಿತಿ ಕೊಟ್ಟಿರುವುದಾಗಿ ಘೋಷಿಸಿದರು. ತರಗತಿಗೆ ಗೈರುಹಾಜರಾದರೆ ಹಾಜರಾತಿಯ ಕೊರತೆಯಾಗುತ್ತದೆಯಲ್ಲ ಎಂಬ ಆತಂಕಕ್ಕೆ ಪರಿಹಾರವಾಗಿ ಶೇ. ೧೦೦ ಹಾಜರಾತಿಯನ್ನು ಮುಂಗಡವಾಗಿ ಕೊಟ್ಟುಬಿಡುವುದಾಗಿ ಹೇಳಿ ಶಿಷ್ಯರ ಪ್ರಶ್ನಾಸ್ತ್ರಗಳಿಂದ ಪಾರಾದರು.

ಕ್ವಚಿತ್ತಾದ ಇಂತಹ ಸಂದರ್ಭಗಳಿಂದ ಅನಂತಕುಮಾರನ ವಿದ್ಯಾಭ್ಯಾಸ ತಪ್ಪುಹಾದಿ ಹಿಡಿಯಿತೆಂದಾಗಲಿ, ಅಧ್ಯಾಪಕರ ವಿಷಯದಲ್ಲಿ ಆತನ ಅವಿನಯ, ಅವಿಧೇಯತೆಗಳನ್ನು ತೋರ್ಪಡಿಸುವುದೆಂದಾಗಲಿ ಯಾರೂ ಭಾವಿಸಬೇಕಾಗಿಲ್ಲ. ಎಂ.ಟಿ.ಎಸ್. ಕಾಲೊನಿಯ ಮಕ್ಕಳ ಸಹವಾಸದಲ್ಲಿ ಹುಡುಗಾಟ, ತುಂಟಾಟಗಳು ಪ್ರಾಯದ ಒಂದು ಹಂತದವರೆಗೆ ಮಾತ್ರ ಅನುಸರಿಸಿ ಬಂದರೆ, ಗುರುಹಿರಿಯರ ಬಗೆಗಿನ ಸಾಂಪ್ರದಾಯಕ ಆಚಾರವಿಚಾರಗಳು ಅನಂತಕುಮಾರನ ಜೀವನದುದ್ದಕ್ಕೂ ಆತನನ್ನು ಎಡೆಬಿಡದೆ ಹಿಂಬಾಲಿಸಿದವು.

ಅವೆಲ್ಲಕ್ಕಿಂತ ಮುಖ್ಯವಾಗಿ ಎಂ.ಟಿ.ಎಸ್. ಕಾಲೊನಿಯ ಎಳೆತನದ ಆಟಪಾಟಗಳಿಂದಲೂ ತಂದೆತಾಯಿ ಹಾಗೂ ಹಿರಿಯರ ಮಾರ್ಗದರ್ಶನದಿಂದಲೂ ಮೈಗೂಡತೊಡಗಿದ್ದ ನಾಯಕತ್ವದ ಲಕ್ಷಣಗಳೇ ಅನಂತಕುಮಾರನನ್ನು ಕಾಲೇಜು ಕಲಿಯುವ ಇತರ ಸಾವಿರಾರು ಹುಡುಗರಿಂದ ಪ್ರತ್ಯೇಕವೂ ವಿಶಿಷ್ಟವೂ ಆದ ಮುಂದಾಳ್ತನದೆಡೆಗೆ ಒಯ್ಯಲು ಸಾಧನಗಳಾದವು ಎಂದರೆ ತಪ್ಪಾಗಲಾರದು. ಅನಂತಕುಮಾರ್ ಕಾಲೇಜು ಸೇರಿದ ಪ್ರಾರಂಭದಲ್ಲೇ (ಜೂನ್ ೧೯೭೫) ದೇಶದ ಮೇಲೆ ಹೇರಲಾದ ತುರ್ತು ಪರಿಸ್ಥಿತಿಯು ಅನಂತನ ನಾಯಕತ್ವವನ್ನು ಉದ್ದೀಪಿಸಲು ವೇಗವರ್ಧಕವಾದುದು ಸುಳ್ಳಲ್ಲ. ◆

ಮುಂದುವರಿಯುವುದು

## ಅಭಿಪ್ರಾಯ

ವಾಸ್ತುಶಾಸ್ತ್ರವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ 'ಭಾರತೀಯ ಇತಿಹಾಸ ಮತ್ತು ವಾಸ್ತುಶಾಸ್ತ್ರ' ಎಂಬ ಬೋಧನಾ ವಿಷಯ ಈಗಾಗಲೇ ಇದೆ. ಆದರೆ ಅದು ಕೇವಲ ಪರಿಚಯಾತ್ಮಕ ಮಟ್ಟದಲ್ಲಿದ್ದು ದೇವಾಲಯಗಳ ಜೊತೆಗೆ ಶಾಸನಗಳು, ವೇದೋಪನಿಷತ್ತುಗಳು, ಆಗಮ ಶಾಸ್ತ್ರ ಮೊದಲಾದವುಗಳ ಬಗ್ಗೆ ಅನಂತಕುಮಾರ್ ಪ್ರತಿಷ್ಠಾನವು ಸಿದ್ಧಪಡಿಸಿರುವ 'ಭಾರತೀಯ ಜ್ಞಾನ ಪದ್ಧತಿ' ಪಠ್ಯವನ್ನು ಉನ್ನತ ವ್ಯಾಸಂಗಕ್ಕೆ ಐಚ್ಛಿಕ ಪಠ್ಯವಿಷಯವಾಗಿ ಸೂಚಿಸಬಹುದು ಎಂದು ನನಗನ್ನಿಸುತ್ತದೆ. ಈ ಜ್ಞಾನವನ್ನು ಹೊಸಪೀಳಿಗೆಗೆ ವರ್ಗಾಯಿಸುವುದೂ ಒಂದು ಸಮಾಜಸೇವೆ ಎಂದು ನಾನು ಭಾವಿಸುತ್ತೇನೆ.

**- ಪ್ರೊ. ಸಿಂಧು ಜಗನ್ನಾಥ್,**
ದಯಾನಂದ ಸಾಗರ ಕಾಲೇಜ್ ಆಫ್ ಆರ್ಕಿಟೆಕ್ಚರ್, ಬೆಂಗಳೂರು.

# ಅಮೃತಮಹೋತ್ಸವದ ಸಂಭ್ರಮದಲ್ಲಿ ವಿದ್ಯಾರ್ಥಿ ಪರಿಷತ್ತು

೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ಇನ್ನೂರು ವರ್ಷಗಳ ಗುಲಾಮಿ ಮನಃಸ್ಥಿತಿಯನ್ನು ತೊಡೆದು, ಭಾರತದ ವೈಭವವನ್ನು ಮರಳಿ ಸ್ಥಾಪಿಸುವ ಕನಸು ಹೊತ್ತ ರಾಷ್ಟ್ರಭಕ್ತರ ಎದುರು ಈ ಕಾರ್ಯಕ್ಕಾಗಿ ದೇಶದ ಯುವ ಪೀಳಿಗೆಯನ್ನು ಸಜ್ಜುಗೊಳಿಸುವ ಸವಾಲು ಎದುರಾಗಿತ್ತು. ದೇಶದ ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಸಂಘಟಿಸಿ ಅವರನ್ನು ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸುವ ಪ್ರಯತ್ನಗಳು ೧೯೪೮ರಲ್ಲಿಯೇ ಆರಂಭವಾಯಿತು. ಈ ಪ್ರಯತ್ನಗಳ ಫಲವೇ ೧೯೪೯ರ ಜುಲೈ ೯ರಂದು ಸ್ಥಾಪನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು. ಇದರ ಮೊದಲ ರಾಷ್ಟ್ರೀಯ ಸಮ್ಮೇಳನವು ೧೯೪೮ರಲ್ಲಿಯೇ ಅಂಬಾಲಾದಲ್ಲಿ ನಡೆಯಿತು. ಪ್ರೊ. ಓಂ ಪ್ರಕಾಶ್ ಬಹಲ್ ಪರಿಷತ್ತಿನ ಮೊದಲ ರಾಷ್ಟ್ರೀಯ ಅಧ್ಯಕ್ಷರು ಮತ್ತು ಮತ್ತು ಶ್ರೀ ಕೇಶವ ದೇವ್ ವರ್ಮಾ, ಮೊದಲ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು. ಆದರೆ ೧೯೫೮ರಲ್ಲಿ ಪರಿಷತ್ತಿನ ನೇತೃತ್ವ ವಹಿಸಿದ ಯಶವಂತರಾವ್ ಕೇಲ್ಕರ್ ಪರಿಷತ್ತಿಗೆ ಇಂದಿನ ಸ್ವರೂಪವನ್ನು ನೀಡಿದರು. ಡಾ. ರಾಜಶರಣ ಶಾಹಿ ಇಂದಿನ ಅಧ್ಯಕ್ಷರು ಮತ್ತು ಶ್ರೀ ಯಾಜ್ಞವಲ್ಕ್ಯ ಶುಕ್ಲಾ ಇಂದಿನ ಕಾರ್ಯದರ್ಶಿಗಳು ಸಾಮಾನ್ಯವಾಗಿ ಇಂದಿನ ವಿದ್ಯಾರ್ಥಿಗಳೇ ನಾಳಿನ ನಾಗರಿಕರು ಎನ್ನುತ್ತಾರೆ. ಆದರೆ 'ಇಂದಿನ ವಿದ್ಯಾರ್ಥಿಗಳು ಇಂದಿನ ನಾಗರಿಕರು' ಎಂದು ಭಾವಿಸುವ ಪರಿಷತ್ತು ಸಮಾಜದಲ್ಲಿ ಪರಿವರ್ತನೆ ತರುವುದು ತನಗೆ ಸಾಧ್ಯ ಮತ್ತು ಅದು ಅಗತ್ಯವೂ ಹೌದು ಎಂದು ಭಾವಿಸುತ್ತದೆ. ಈ ನಿಟ್ಟಿನಲ್ಲಿ ಪರಿಷತ್ತು ಅನೇಕ ಸಾಮಾಜಿಕ ಚಳುವಳಿಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ೬೦-೭೦ರ ದಶಕದಲ್ಲಿ ಪ್ರಮುಖವಾಗಿ ಬಿಹಾರದಲ್ಲಿ ಮತ್ತು ಗುಜರಾತಿನಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಚಳುವಳಿಗಳು ಮತ್ತು ೮೦ರ ದಶಕದಲ್ಲಿ ಕರ್ನಾಟಕದ ಶಿಕ್ಷಣರಂಗದ ಅವ್ಯವಸ್ಥೆಯನ್ನು ಪ್ರತಿಭಟಿಸಿ ಮಾಡಿದ ಚಳುವಳಿಗಳನ್ನು ನೆನಪಿಸಿಕೊಳ್ಳಬಹುದು. ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲಿ ಪರಿಷತ್ತಿನದೇ ಪ್ರಧಾನ ಪಾತ್ರ.

ತನ್ನ ಈ ಎಪ್ಪತ್ತೈದು ವರ್ಷಗಳ ಅಸ್ತಿತ್ವದಲ್ಲಿ ಪರಿಷತ್ತು ಜಗತ್ತಿನ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿ ಹೊರಹೊಮ್ಮಿದೆ. ೨೦೧೬ರ ಅಂಕಿ ಅಂಶಗಳ ಪ್ರಕಾರ ಪರಿಷತ್ತು ೩೧.೭೫ ಲಕ್ಷ ಸದಸ್ಯರನ್ನು ಹೊಂದಿತ್ತು. ರಾಷ್ಟ್ರೀಯ ಪುನರ್ನಿಮಾಣದ ಸಂಕಲ್ಪ ತೆಗೆದುಕೊಂಡಿರುವ



ಪರಿಷತ್ತು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗಾಗಿ ಅನೇಕ ವೇದಿಕೆಗಳನ್ನು ನಿರ್ಮಾಣ ಮಾಡಿದೆ. ವಿಕಾಸಾರ್ಥ ವಿದ್ಯಾರ್ಥಿ (Student for Development), ವಸುಧೈವ ಕುಟುಂಬಕಂ ಕಲ್ಪನೆಯಲ್ಲಿ ದೇಶ ಮೊದಲು ಎಂಬ ಆದರ್ಶವನ್ನು ಹೊತ್ತಿಸಲು 'ವಿದ್ಯಾರ್ಥಿಗಳು ಮತ್ತು ಯುವಕರ ಜಾಗತಿಕ ಸಂಸ್ಥೆ' (WOSY), ಪೂರ್ವೋತ್ತರ ಭಾರತದ ವಿದ್ಯಾರ್ಥಿಗಳನ್ನು ಮುಖ್ಯಧಾರೆಗೆ ತರುವ Students' Experience in Interstate Living (SEIL), ಯುವ ವಿಕಾಸ ಕೇಂದ್ರ (YVK) ಮುಂತಾದ ಉಪಕ್ರಮಗಳನ್ನು ಪರಿಷತ್ತು ಪ್ರಾರಂಭಿಸಿದೆ.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ರಾಜಕೀಯವನ್ನು ಮೀರಿದ ಒಂದು ಸರಕಾರೇತರ ಸಂಸ್ಥೆಯಾಗಿದೆ. (ಈ ಸಂಸ್ಥೆಯ ಸದಸ್ಯರಾಗಲು ಮುಂದಿನ ಕೊಂಡಿಯನ್ನು ಸಂಪರ್ಕಿಸಬಹುದು - https://www.abvp.org/user/register) ◆

ಪುಟ 1 ರಿಂದ

## ವಿದ್ಯಾರ್ಥಿ ಚಳುವಳಿಗೆ ಹೊಸ ಸ್ವರೂಪ

ವಯಸ್ಸಿನ ವಿದ್ಯಾರ್ಥಿಗಳು ಪರಿಷತ್ತಿಗೆ ಆಧಾರವಾಗಿದ್ದರು. ಈ ವಿದ್ಯಾರ್ಥಿಗಳ ಸಾಮರ್ಥ್ಯದ ಮೇಲೆ ರಾಷ್ಟ್ರಮಟ್ಟದ ಸಮ್ಮೇಳನವನ್ನು ನಡೆಸುವುದು ಸಾಧ್ಯವೇ? ಎಂಬ ಅನುಮಾನ ನಮಗಿತ್ತು. ಸಮ್ಮೇಳನದ ವಿಚಾರವನ್ನು ಹುಬ್ಬಳ್ಳಿಯ ಕಾರ್ಯಕರ್ತರ ಎದುರು ಪ್ರಸ್ತಾಪಿಸಿದೆ. ಪ್ರಾರಂಭದಲ್ಲಿ ಸ್ವಲ್ಪ ಹಿಂದೇಟು ಹಾಕಿದರೂ ಸ್ವಲ್ಪ ಚರ್ಚೆಯ ನಂತರ ಹುಬ್ಬಳ್ಳಿಯಲ್ಲಿ ಸಮ್ಮೇಳನ ನಡೆಸುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಈ ರೀತಿಯಾಗಿ ಆತ್ಮವಿಶ್ವಾಸದಿಂದ ಮಾತನಾಡಿ ನಂತರ ನೇತೃತ್ವವನ್ನು ವಹಿಸಿಕೊಂಡವರು, ಅನಂತಕುಮಾರ್. ಅಚ್ಯುತ ಲಿಮಯೆ, ವಿಷ್ಣುಕಾಂತ ಚಟಪಲ್ಲಿ ಗುಡ್ಡು ಇನಾಂದಾರ್, ವ್ಯಾಸ ದೇಶಪಾಂಡೆ, ಡಾ. ಮಂಟೂರ್ ಮುಂತಾದವರ ಕ್ರಿಯಾಶಾಲಿ ನೇತೃತ್ವದಲ್ಲಿ ಸಮ್ಮೇಳನ ನಡೆಯಿತು. ಹುಬ್ಬಳ್ಳಿಯ ಪ್ರಸಿದ್ಧ ವೈದ್ಯರಾಗಿದ್ದ ಡಾ. ಆರ್. ಬಿ. ಪಾಟೀಲರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನವು ಇಡೀ ಪ್ರಾಂತ್ಯದಲ್ಲಿ ಪರಿಷತ್ತಿನ ಚಟುವಟಿಕೆಗಳಿಗೆ ಬಲವನ್ನು ತುಂಬಿದಂತಹ ಒಂದು ಘಟನೆಯಾಗಿತ್ತು.

ನಾನು ಪರಿಷತ್ತಿನ ಕೆಲಸದ ಮೇಲೆ ಪ್ರವಾಸ ಮಾಡುವಾಗ ಪರಿಷತ್ತಿನ ಸದಸ್ಯರ ಮನೆಗಳಲ್ಲಿ ಉಳಿದುಕೊಳ್ಳುವುದು ನನ್ನ ಅಭ್ಯಾಸ. ಈ ನಿಟ್ಟಿನಲ್ಲಿ ಹುಬ್ಬಳ್ಳಿಯ ಪ್ರವಾಸಗಳ ವೇಳೆ ನಾನು ಅನಂತಕುಮಾರರ ಮನೆಯಲ್ಲಿಯೇ ಉಳಿದುಕೊಳ್ಳುವ, ಊಟ ಮಾಡುವ ಸಂದರ್ಭಗಳು ಬಂದಿದ್ದವು.

ಅನಂತಕುಮಾರ್ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಕ್ರಿಯಾಶಾಲಿಯಾಗಿದ್ದರು. ಮಾತ್ರವಲ್ಲ, ಒಂದು ವಿಚಾರಕ್ಕೆ ಬದ್ಧರಾದ ಕಾರ್ಯಕರ್ತರ ಒಂದು ತಂಡವನ್ನು ನಿರ್ಮಾಣ ಮಾಡುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು. ಅವರ ಅಂದಿನ ಪ್ರಯತ್ನಗಳ ಫಲವಾಗಿ ಹುಬ್ಬಳ್ಳಿಯಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳು ಬಲಗೊಂಡಿದ್ದು ಮಾತ್ರವಲ್ಲ, ವಿಶ್ವವಿದ್ಯಾನಿಲಯ ಮಟ್ಟದಲ್ಲಿಯೂ ಪರಿಷತ್ತಿನ ಪ್ರಭಾವ ಹೆಚ್ಚಾಗಿತ್ತು.

ಅಂದಿನ ದಿನಗಳಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿ ಚಳುವಳಿಗಳಿಗೆ ಹೆಚ್ಚಿನ ಗೌರವ, ಮನ್ನಣೆಗಳಿರಲಿಲ್ಲ. ವಿದ್ಯಾರ್ಥಿ ಚಳುವಳಿಗಾರರು ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗವಹಿಸುವವರು ಎಂಬ ಭಾವನೆ ವ್ಯಾಪಕವಾಗಿತ್ತು. ಅದಕ್ಕೆ ಕಾರಣವೂ ಇತ್ತು. ಆ ಸಂದರ್ಭದಲ್ಲಿ ನಡೆದ ವಿದ್ಯಾರ್ಥಿ ಚಳುವಳಿಗಳು ಸ್ವಲ್ಪ ಹಾದಿ ತಪ್ಪಿ ಹಿಂಸಾತ್ಮಕವಾದ ಸ್ವರೂಪವನ್ನು ಪಡೆದಿದ್ದವು. ಈ ಮಧ್ಯದಲ್ಲಿ ರಚನಾತ್ಮಕವಾದ ವಿದ್ಯಾರ್ಥಿ ಆಂದೋಲನವನ್ನು ನಿರ್ಮಾಣ ಮಾಡಬಹುದು ಎಂಬುದನ್ನು ವಿದ್ಯಾರ್ಥಿ ಪರಿಷತ್ತಿನ ಕಾರ್ಯಗಳ ಮೂಲಕ ತೋರ್ಪಡಿಸಿದ ಕಾರ್ಯಕರ್ತರಲ್ಲಿ ಅನಂತಕುಮಾರ್ ಅವರದ್ದು ಪ್ರಮುಖ ಪಾತ್ರ. ಇದರ ಪರಿಣಾಮವಾಗಿ ವಿಶ್ವವಿದ್ಯಾನಿಲಯಗಳು ಕೂಡ ಸಮಸ್ಯೆಗಳು ಎದುರಾದಾಗ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರನ್ನು ಕರೆದು ಅವರೊಂದಿಗೆ ಸಮಾಲೋಚನೆ ಮಾಡಿ ಅವರ ಅಭಿಪ್ರಾಯಗಳನ್ನು ಪಡೆದು ತೀರ್ಮಾನ ತೆಗೆದುಕೊಳ್ಳುವಂತಹ ಸಂದರ್ಭಗಳು ಬಂದವು. ಉದಾಹರಣೆಗೆ ಆ ಸಂದರ್ಭದಲ್ಲಿ ಪರೀಕ್ಷೆ ಹತ್ತಿರವಾಗುವ ವರೆಗೂ ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ಯಾವುದೇ ಪೂರ್ವ ತಯಾರಿ ಮಾಡಿಕೊಳ್ಳದೆ ಇರುವ ವಿದ್ಯಾರ್ಥಿ ನಾಯಕರು ಪ್ರತಿವರ್ಷವೂ ಪರೀಕ್ಷೆಗಳ ಘೋಷಣೆಯಾದಾಗ ಒಂದಲ್ಲ ಒಂದು ಕಾರಣ ನೀಡಿ ಪರೀಕ್ಷೆಗಳನ್ನು ಮುಂದೂಡಬೇಕೆಂದು ಆಗ್ರಹ ಪಡಿಸುವ ಚಳುವಳಿಗಳು ಸಾಮಾನ್ಯವಾಗಿದ್ದವು. ಆದರೆ ಆಗ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ಪರೀಕ್ಷೆಗಳನ್ನು ಮುಂದೂಡುವುದರಿಂದ ಅನೇಕ ರೀತಿಯ ಸಮಸ್ಯೆಗಳು ಎದುರಾಗುತ್ತವೆ; ವಿಶೇಷವಾಗಿ ತಾವು ಕಲಿಯುತ್ತಿದ್ದ ವಿಶ್ವವಿದ್ಯಾನಿಲಯದ ಫಲಿತಾಂಶ ಸರಿಯಾಗಿ ಸಮಯಕ್ಕೆ ಬರದೆ ಹೋದರೆ ಉನ್ನತ ಶಿಕ್ಷಣಕ್ಕೆ ಹೋಗುವವರಿಗೆ, ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಗುವವರಿಗೆ ಪ್ರವೇಶ ದೊರೆಯುವುದು ಕಷ್ಟವಾಗುತ್ತಿತ್ತು ಎಂಬುದನ್ನು ಗಮನಿಸಿ ಕಾಲಕ್ಕೆ ಸರಿಯಾಗಿ ಪರೀಕ್ಷೆಗಳು ನಡೆಯಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡಿದ್ದರು. ಈ ನಿರ್ಣಯದ ಪರವಾಗಿ ನಡೆದ ಚಳುವಳಿಯ ನೇತೃತ್ವವನ್ನು ಅನಂತಕುಮಾರ್ ವಹಿಸಿದ್ದರು. ವಿದ್ಯಾರ್ಥಿಗಳಿಗೆ ವಿರುದ್ಧವಾದ ನಿಲುವುಗಳನ್ನು ಅನಂತಕುಮಾರ್ ತೆಗೆದುಕೊಂಡಿದ್ದಾರೆ ಎಂದು ಅನೇಕ ವಿದ್ಯಾರ್ಥಿಗಳು ಸಿಡಿದೆದ್ದರೂ ಅನಂತಕುಮಾರ್ ಅದಕ್ಕೆ ಜಗ್ಗಲಿಲ್ಲ. ಪರೀಕ್ಷೆಗಳು ಕಾಲಕ್ಕೆ ಸರಿಯಾಗಿ ನಡೆಯಬೇಕೆಂಬ ದೃಢ ನಿಲುವನ್ನು ಅನಂತಕುಮಾರ್ ತಳೆದಿದ್ದರು. ಅವರು ಉಪಕುಲಪತಿಗಳನ್ನು ಭೇಟಿಯಾಗಿ ಅವರಿಗೂ ತಮ್ಮ ನಿಲುವನ್ನು ತಿಳಿಸಿದ್ದಲ್ಲದೆ 'ನೀವು ಪರೀಕ್ಷೆಗಳನ್ನು ನಡೆಸಿ, ನಾವು ನಿಮ್ಮ ಜೊತೆ ನಿಲ್ಲುತ್ತೇವೆ' ಎಂಬ ಭರವಸೆಯನ್ನು ನೀಡಿದ್ದರು. ಆ ವರ್ಷ ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆಗಳು ಕಾಲಕ್ಕೆ ಸರಿಯಾಗಿ ನಡೆದವು. ಹೀಗೆ ಒಂದು ರಚನಾತ್ಮಕವಾದ ವಿದ್ಯಾರ್ಥಿ ಆಂದೋಲನವನ್ನು ರೂಪಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟವರು ಅನಂತ ಕುಮಾರ್ ಮತ್ತು ಅವರ ಜೊತೆಯಲ್ಲಿದ್ದ ವಿದ್ಯಾರ್ಥಿ ಪರಿಷತ್ತಿನ ಇತರ ಕಾರ್ಯಕರ್ತರು.

ಈ ರೀತಿಯಾಗಿ ವಿದ್ಯಾರ್ಥಿ ಚಳುವಳಿಗಳಿಗೆ ಒಂದು ಹೊಸ ಸ್ವರೂಪವನ್ನು ನೀಡಿದ ಶ್ರೇಯಸ್ಸು ಆಗಿನ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರ ತಂಡಕ್ಕೆ ಸಲ್ಲುತ್ತದೆ. ಆ ತಂಡದಲ್ಲಿ ಅನಂತಕುಮಾರ್ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದರು. ◆

# ಪ್ರತಿದಿನ ಉಣ್ಣುವಾಗ ನೆನಪಾಗುವ ಅನಂತಣ್ಣ......

ಏಕನಿಷ್ಠೆ, ಏಕಾಗ್ರತೆಯಿಂದ, ಛಲದೊಂದಿಗೆ ಯಾರು ಮುನ್ನುಗ್ಗಿ ಹಿಡಿದ ಕೆಲಸ ಬಿಡದೆ ಮಾಡುತ್ತ ಗುರಿಯತ್ತ ನಡೆಯುತ್ತಾನೋ, ಆತ ಮಾತ್ರ ತನ್ನ ಆಸುಪಾಸಿನ ಜನಸಾಮಾನ್ಯರು, ಬಿರುಗಾಳಿಗೊಡ್ಡಿದ ತರಗಲೆಯಂತೆ ಚದುರಿ ನಿರ್ನಾಮವಾಗುವಾಗಲೂ ಮುಗಿಲೆತ್ತರಕ್ಕೇರಿ ಗೋಪುರದಂತೆ ದೃಢವಾಗಿ ಕಂಗೊಳಿಸುತ್ತಾನೆ." – ವಿಲಿಯಂ ಜೇಮ್ಸ್.

೨೦೧೬ರ ನವೆಂಬರ್ ತಿಂಗಳ ಒಂದು ರವಿವಾರ. ಊಟಕ್ಕೆ ಕುಳಿತಿದ್ದೆ. ಆದರೆ, ತಲೆತುಂಬಾ ದೆಹಲಿಯ ಆರ್.ಎನ್.ಐ ಕಛೇರಿಯದೇ ಚಿಂತೆಯಾಗಿತ್ತು. ಅಲ್ಲಿನ ದಾಖಲೆಯಲ್ಲಿ ಪತ್ರಿಕೆಯ ಮಾಲಿಕತ್ವದ ಕಾಲಂನಲ್ಲಿ ೩೦ ವರ್ಷಗಳ ಕಾಲ 'ನಾಗರಿಕ' ಪತ್ರಿಕೆಯನ್ನು ನಡೆಸಿದ ನನ್ನ ಹೆಸರೇ ಇರಲಿಲ್ಲ ಬದಲಾಗಿ 'ಜಾನ್ ಡಿಸೋಜ' ಎಂಬ ಹೆಸರಿತ್ತು. ಪತ್ರಿಕೆಯ ವೆಬ್‌ಸೈಟ್‌ನಲ್ಲಿ ನಾಗರಿಕ ಪತ್ರಿಕೆಯನ್ನು ನಡೆಸುವ ನನ್ನ ಹೆಸರು ಕಾಣಿಸಿಕೊಳ್ಳದಿದ್ದರೆ, ನಾನು ಮಾಲೀಕ ಪ್ರಕಾಶಕನೆಂದು ಅಲ್ಲಿ ದಾಖಲಾಗದೇ ಇದ್ದರೆ ಅಂಚೆ ಇಲಾಖೆಯವರು ನನಗೆ ಅಂಚೆ ವಿನಾಯಿತಿಯನ್ನು ನೀಡುತ್ತಿರಲಿಲ್ಲ. ನಾಗರಿಕ ಪತ್ರಿಕೆಗೆ ೪ ರೂಪಾಯಿ ಸ್ಟಾಂಪು ಅಂಟಿಸಿ ವಿಂಗಡಣೆಗೆ ೧೦ ಪೈಸೆ ಶುಲ್ಕವನ್ನು ಬೇರೆ ತುಂಬಿ ಓದುಗರಿಗೆ ಕಳುಹಿಸುವುದಕ್ಕಿಂತ ಪತ್ರಿಕೆ ನಿಲ್ಲಿಸಿ ಬೇರೆ ಉದ್ಯೋಗ ಮಾಡುವುದು ಒಳಿತು ಎಂಬ ನಿರ್ಧಾರಕ್ಕೆ ನಾನು ಬಂದಿದ್ದೆ.

ಕುಮಟಾದ ಶತಮಾನದ ಹೊಸ್ತಿಲಲ್ಲಿ ಇರುವ 'ಕಾನಡಾ ವೃತ್ತ' ಪತ್ರಿಕೆಯ ಉಸ್ತುವಾರಿ ಸಂಪಾದಕರಾದ ಶ್ರೀಕಾಂತ್ ಶ್ಯಾನ್‌ಭಾಗರೂ ಇದೇ ಸಮಸ್ಯೆಯಲ್ಲಿ ಸಿಕ್ಕಿದ್ದರು. ಅವರ ಚಿಕ್ಕಪ್ಪ ದಿ. ಪಾಂಡುರಂಗ ಶ್ಯಾನ್‌ಭಾಗರು ಪ್ರಾರಂಭಿಸಿದ ಕಾನಡಾ ವೃತ್ತ ಪತ್ರಿಕೆಯ ಮಾಲಿಕರ ಕಾಲಂನಲ್ಲಿಯೂ ಶ್ರೀಕಾಂತರ ಹೆಸರಿರಲಿಲ್ಲ. ಅವರ ಆಸ್ತಿ ಹಿಸೆಪಟ್ಟಿಯಲ್ಲಿ ಪತ್ರಿಕೆ ಅವರ ಹೆಸರಿಗೆ ಬಂದರೂ ಆರ್.ಎನ್.ಐ ವೆಬ್‌ಸೈಟ್‌ನಲ್ಲಿ ಮಾತ್ರ ಶ್ರೀಕಾಂತ್ ಶ್ಯಾನ್‌ಭಾಗರ ಹೆಸರು ಬಂದಿರಲಿಲ್ಲ. ಅದಕ್ಕಾಗಿ ಶ್ರೀಕಾಂತ್ ಶ್ಯಾನ್‌ಭಾಗರು ಆರ್.ಎನ್.ಐ ಕಛೇರಿಗೆ ಭೇಟಿ ಇತ್ತು ಮಾಲಿಕತ್ವದ ಕಾಲಂ ಅಲ್ಲಿ ಅವರ ಹೆಸರನ್ನು ದಾಖಲು ಮಾಡಲು ವಿನಂತಿಸಿಕೊಂಡರು. ಆದರೆ, ಅಲ್ಲಿಯ ಅಧಿಕಾರಿಗಳು ಕೆಲವರು ಅದಕ್ಕಾಗಿ ಲಕ್ಷಾಂತರ ರೂಪಾಯಿ ಲಂಚವನ್ನು ಕೇಳಿದರು. ಅದರಿಂದ ಚಿಂತಿತರಾದ ಅವರು ನನ್ನೊಡನೆ ಚರ್ಚಿಸಿದ್ದರು. ಇಬ್ಬರದೂ ಒಂದೇ ಬಗೆಯ ಸಮಸ್ಯೆಯಾಗಿದ್ದುದರಿಂದ ಸಮಸ್ಯೆಯ ನಿವಾರಣೆಗೆಂದು ನಾವಿಬ್ಬರೂ ಸೇರಿ ದೆಹಲಿಗೆ ಹೋಗಲು ಯೋಚಿಸಿದ್ದೆವು.




ಪತ್ರಿಕೋದ್ಯಮದ ಮುಖೇನ ಅಕ್ಷರ ವ್ಯವಸಾಯಿಗಳಾದ ನಮ್ಮ ಅಳಿವು ಉಳಿವಿನ ಈ ಕಾಲದಲ್ಲಿ ಯಾರಾದರೂ ಆಪದ್ಬಾಂಧವರನ್ನು ಹುಡುಕಿಕೊಳ್ಳಬೇಕಿತ್ತು. ಆಗ ಕೇಂದ್ರಮಂತ್ರಿಯಾಗಿದ್ದ ಅನಂತಕುಮಾರ್ ಆರ್.ಎಸ್.ಎಸ್ ನ ಸ್ವಯಂ ಸೇವಕನಾದಾಗಿನಿಂದ ನನಗೆ ಪರಿಚಿತರಾಗಿದ್ದವರು. ಅವರೊಂದಿಗೆ ಮಾತನಾಡಿ ವಿಷಯವನ್ನು ಅಂತಿಮಗೊಳಿಸಬೇಕೆಂದು ತೀರ್ಮಾನಿಸಿದ್ದೆ. ಈ ವಿಷಯದಲ್ಲಿ ನನಗೆ ತುಂಬಾ ನೆರವಾದವರು ಮಂಜುನಾಥ್. ಆಗ ಮಂಜುನಾಥ್ ಅನಂತಕುಮಾರರ ಆಪ್ತ ಕಾರ್ಯದರ್ಶಿಯೋ ಏನೋ ಆಗಿದ್ದವರು. ನಾನು ಬಾರಿ ಬಾರಿ ಫೋನ್ ಮಾಡಿದಾಗಲೂ ಧೈರ್ಯ ತುಂಬಿದ ಮಂಜುನಾಥ್ ನನಗೆ ಅನಂತಕುಮಾರರ ಖಾಸಗಿ ನಂಬರ್ ದೊರಕಿಸಿಕೊಟ್ಟರು.

ಒಂದು ದಿನ ಅನಂತಕುಮಾರರಿಗೆ ಫೋನ್ ಮಾಡಿದೆ. ರಿಂಗಾಯಿತು. ಅನಂತಕುಮಾರ್ ಫೋನ್ ಎತ್ತಿದರು. 'ಯಾರು ಅನಂತಕುಮಾರ್‌ರವರಾ?' ಎಂದು ನಾನು ಕೇಳಿದಾಗ ಅವರು – 'ಯಾರ್ ರೀ ಅನಂತಕುಮಾರ್‌ಗೇ ಫೋನ್ ಮಾಡಿ ಅನಂತಕುಮಾರಾ? ಎಂದು ಕೇಳುತ್ತೀರಿ, ಯಾರು ನೀವು?' ಎಂದು ಸ್ವಲ್ಪ ಅಸಮಾಧಾನದಿಂದ ಕೇಳಿದರು. ನಾನು ಹೇಳಿದೆ "ನಾನು ಸಾರ್, ನಿಮ್ಮ ತಮ್ಮ ಕೃಷ್ಣಮೂರ್ತಿ ಹೆಬ್ಬಾರ್, ಹೊನ್ನಾವರದಿಂದ ನಿಮ್ಮೊಡನೆ ಸಂಪರ್ಕ ಇರದೆ ೩೦ ವರ್ಷ ಆಯಿತು. ನೀವು ಕೇಂದ್ರ ಮಂತ್ರಿ ಆಗಿದ್ದೀರಿ. ನನ್ನ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ, ತಪ್ಪಾದರೆ ಕ್ಷಮಿಸಿ. ನಿಮ್ಮ ಮಾತಿನ ಠೇಂಕಾರ ನೋಡಿದರೆ ನೀವು ನಮಗೆ ಎಟಕುವುದಿಲ್ಲ ಫೋನ್ ಇಡಿ ಸಾರ್" ಎಂದು ಹೇಳಿ ಫೋನಿಟ್ಟುಬಿಟ್ಟೆ. ಮರುಕ್ಷಣದಲ್ಲಿ ಮತ್ತೆ ಫೋನ್ ರಿಂಗಾಯಿತು. ಎತ್ತಿದೆ. ಅನಂತಕುಮಾರ್ ಆಕಡೆಯಿಂದ ಮಾತನ್ನಾಡುತ್ತಿದ್ದರು. "ಹೇ ಕೃಷ್ಣಮೂರ್ತಿ, ಕ್ಷಮಿಸು ಮಾರಾಯ, ಯಾರೋ ಎಂದು ತಿಳಿದುಕೊಂಡಿದ್ದೆ. ಅಂದು ನಾನು ಹೊನ್ನಾವರದಲ್ಲಿ ಎ.ಬಿ.ವಿ.ಪಿ ಮೆರವಣಿಗೆಗೆ ಬಂದಾಗ ನನ್ನನ್ನು ಸೈಕಲ್ ಮೇಲೆ ಕರ್ಕಿಯಲ್ಲಿ ಮನೆಗೆ ಕರ್ಕೊಂಡು ಹೋಗಿದ್ದೀಯಲ್ಲ. ನಾನು ಹುಬ್ಬಳ್ಳಿ ಬಸ್‌ಗೆ ಅರ್ಜೆಂಟ್ ಹೋಗಬೇಕು ಎಂದಾಗ ನಿಮ್ಮ ಅಮ್ಮ ಪಾಪ, ಎಷ್ಟು ಬೇಗ ಅನ್ನ, ಪಟ್ಲಕಾಯಿ ತಾಳ್ಳು(ಪಲ್ಯ) ಮಾಡಿ ಹಾಕಿದಳು. ಅಷ್ಟೇ ಅಲ್ಲ, ಮತ್ತೆ ಮತ್ತೆ ಬನ್ನಿ ಎಂದು ರಸ್ತೆಯವರೆಗೂ ಬಂದು ಬೀಳ್ಕೊಟ್ಟಿದ್ದನ್ನು ಮರೆಯಲಿಕ್ಕಾಗುತ್ತೇನೋ?" ಎಂದು ಹೇಳಿ ನನ್ನ ಬೇಸರವನ್ನು ತೊಡೆದುಹಾಕಿಬಿಟ್ಟರು. ಆತ್ಮೀಯವಾಗಿ ನನ್ನ ವ್ಯಥೆ ಕಥೆ ಕೇಳಿದರು. ಹಾಗೆ ಕೇಳುತ್ತಲೇ ನನ್ನ-ಅವರ ಸಂಬಂಧದ ಹಳೆಯ ನೆನಪಿಗೆ ಕನ್ನ ಹಾಕಿದರು.........



**ಕೃಷ್ಣಮೂರ್ತಿ ಹೆಬ್ಬಾರ್**
ಸಂಪಾದಕರು, ನಾಗರಿಕ ಪತ್ರಿಕೆ,
ಹೊನ್ನಾವರ

೩೦ ವರ್ಷದ ಹಿಂದೆ ಗೋಕಾಕದ ಸರ್ಕಾರಿ ಹೈಸ್ಕೂಲ್‌ನಲ್ಲಿ ನಾನು ಮತ್ತು ಅನಂತಣ್ಣ ಸೇರಿಕೊಂಡು ಓ.ಟಿ.ಸಿ ಶಿಬಿರದಲ್ಲಿ ಕಬಡ್ಡಿ ಆಡಿದ್ದು, ಹೊನ್ನಾವರ ಎಸ್.ಡಿ.ಎಮ್ ಕಾಲೇಜಿನಲ್ಲಿ ನಾನು ಜನರಲ್ ಸೆಕ್ರೆಟರಿಯಾಗಿದ್ದಾಗ ಎ.ಬಿ.ವಿ.ಪಿ ಯಿಂದ ಬೃಹತ್ ಪ್ರತಿಭಟನೆ ಸಂಘಟಿಸಿದ್ದು, ಹುಬ್ಬಳ್ಳಿ-ಬೆಂಗಳೂರಿನಲ್ಲಿ ಅನಂತಣ್ಣ ಮತ್ತು ದತ್ತಾತ್ರೇಯ ಹೊಸಬಾಳೆ ನೇತೃತ್ವದಲ್ಲಿ ನಡೆದ ವಿದ್ಯಾರ್ಥಿ ಪರಿಷತ್‌ನ ರಾಜ್ಯ ಸಮಾವೇಶದಲ್ಲಿ ಪಾಲ್ಗೊಂಡಿದ್ದು, ಬಳ್ಳಾರಿಯಲ್ಲಿ ಹಿಂದೂ ಸಮಾವೇಶದಲ್ಲಿ ಪಾಲ್ಗೊಂಡಿದ್ದು ಎಲ್ಲವನ್ನೂ ಸ್ಮರಿಸಿದರು.

ಈ ಮಾತುಕತೆಯೆಲ್ಲ ಆಗಿ ಒಂದು ವಾರದಲ್ಲಿಯೇ ಅವರ ಕಛೇರಿ ಸಹಾಯಕರ ಮೂಲಕ, ನನ್ನ ಸಂಪಾದಕತ್ವದಲ್ಲಿ ೩೦ ವರ್ಷಗಳ ಕಾಲ ನಡೆದ ನಾಗರಿಕ ಪತ್ರಿಕೆಗೆ ಸಂಬಂಧಪಟ್ಟಂತೆ ಆರ್.ಎನ್.ಐ ಗೆ ಬೇಕಾದ ಎಲ್ಲಾ ದಾಖಲೆ, ಮಾಹಿತಿ. ಅಫಿಡವಿಟ್ ಎಲ್ಲವನ್ನೂ ತರಿಸಿಕೊಂಡಿದ್ದರು. ನಂತರದ ಒಂದೂವರೆ ತಿಂಗಳಲ್ಲಿ ದೆಹಲಿಯ ಆರ್. ಎನ್.ಐ ಕಛೇರಿಗೆ ನಾನು ಹೋಗದೇ, ಹತ್ತು ಪೈಸೆ ಖರ್ಚಿಲ್ಲದೆ ನನ್ನ ಕೆಲಸವಾಗಿತ್ತು. "ನಾಗರಿಕ" ಪತ್ರಿಕೆಯ ಸಂಪಾದಕ-ಪ್ರಕಾಶಕ-ಮುದ್ರಕನಾಗಿ ನಾನು ವೆಬ್‌ಸೈಟ್‌ನಲ್ಲಿ ದಾಖಲಾಗಿದ್ದೆ!

ಆರ್. ಎನ್. ಐ ನಂಬರ್‌ನೊಂದಿಗೆ ನವೀಕೃತ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ನನ್ನ ಮನೆಬಾಗಿಲಿಗೆ ಬಂದಿತ್ತು!!

ಇದು ಕೆಲಸ ಮಾಡುವ, ದಿನವಿಡೀ ಜನರಿಗಾಗಿ ತನ್ನ ಅಧಿಕಾರ ಬಳಸುವ, ಆ ಅನಂತಕುಮಾರರ ಯೋಗ್ಯತೆ, ಚಾಕಚಕ್ಯತೆ, ಮಾನವೀಯತೆ!

ಉಣ್ಣುವಾಗ ನೆನಪಾದ ಅನಂತಣ್ಣ, ನನ್ನ ತಾಯಿ ಇತ್ತ ಒಂದು ಹಿಡಿ ಅನ್ನ, ಮತ್ತು ಪಟ್ಲಕಾಯಿ ತಾಳ್ಳು ನೆನಸಿಕೊಂಡು ನನ್ನಂತಹ ಹುಲುಸಂಪಾದಕನಿಗೆ ಜೀವನಪೂರ್ತಿ ಅನ್ನವಿಕ್ಕುವ ಪತ್ರಿಕೆ ಎಂಬ ಅನ್ನದ ಬಟ್ಟಲನ್ನು ನನ್ನ ಕೈಗೆ ಇತ್ತಿದ್ದರು. ಅಷ್ಟೇ ಅಲ್ಲ, ೨೦೦೦ದ ಸಾಲಿನಲ್ಲಿ 'ಕೆನರಾ ಸೂರ್ಯ' ಹೆಸರಿನ ದಿನಪತ್ರಿಕೆ ಟೈಟಲ್‌ನ್ನು ಆರ್. ಎನ್.ಐ ದಿಂದ ತೆಗೆದುಕೊಳ್ಳುವಾಗಲೂ ಇದೇ ಅನಂತಣ್ಣ, ಅವರಿಗೆ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ಸಹಪಾಠಿ ಗೆಳೆಯ ವಿಶ್ವೇಶ್ವರ ಭಟ್ ನನಗೆ ಶಿಫಾರಸ್ಸುಪತ್ರ ನೀಡಿ ಸಹಕರಿಸಿದ್ದರು.

ಒಟ್ಟಾರೆ ನಾನು ಜೀವಂತ ಇರುವವರೆಗೆ ಪ್ರತಿದಿನ ಉಣ್ಣುವಾಗಲೂ, ಕೊಂಡು ಓದಿ ಅನ್ನ ನೀಡುವ ಓದುವವರ ಜೊತೆ ನೆನಪಾಗುವ ಒಂದೇ ಹೆಸರು ಈ ಅನಂತಣ್ಣ. ಮಮತೆ, ಸಮತೆ, ಮಾನವೀಯತೆಗೆ ತನ್ನ ಜೀವನವನ್ನೇ ಮುಡುಪಿಟ್ಟ ಅದಮ್ಯಚೇತನವಾದ ಆ ಪುಣ್ಯಜೀವಿಯ ನೆನಪಿಗೆ ನನ್ನ ಅನಂತ ನುಡಿನಮನ. ◆

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

# ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರದ ಶಿಕ್ಷಕ ತರಬೇತಿ ಕಾರ್ಯಾಗಾರ



ಅನಂತಕುಮಾರ್ ಪ್ರತಿಷ್ಠಾನವು ನೇತೃತ್ವ, ನೀತಿ ನಿರೂಪಣೆ ಮತ್ತು ಭಾರತೀಯ ಸಂಸ್ಕೃತಿಗಳ ಪರಿಚಯ ಮುಂತಾದ ಹಲವು ಉದ್ದೇಶಗಳನ್ನು ಹೊಂದಿದೆ. ಈ ಉದ್ದೇಶಗಳ ಈಡೇರಿಕೆಗಾಗಿ ಪ್ರತಿಷ್ಠಾನವು ಅನಂತ ಚೇತನ (ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರ) ವನ್ನು ಪ್ರಾರಂಭಿಸಿದೆ. ಅನಂತ ಚೇತನವು ಕೇಂದ್ರ ಸರಕಾರ ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ಕೆಲವು ಪಠ್ಯಕ್ರಮಗಳನ್ನು ರೂಪಿಸುವ ಕಾರ್ಯವನ್ನು ನಡೆಸುತ್ತಿದೆ. ಈ ನಿಟ್ಟಿನಲ್ಲಿ, ಭಾರತೀಯ ಜ್ಞಾನ ಪದ್ಧತಿಯ ಭಾಗವಾಗಿರುವ "ಸಾಮಾಜಿಕ ಸಂಸ್ಥೆಗಳಾಗಿ ದೇವಾಲಯಗಳು" ಎಂಬ ವಿಷಯದ ಮೇಲೆ ರಾಜ್ಯದ ಸುಪ್ರಸಿದ್ಧ ವಿಷಯ ಪರಿಣತರನ್ನು ಆಹ್ವಾನಿಸಿ ಅವರ ಸಹಾಯದಿಂದ ಒಂದು ವಿಶೇಷವಾದ ಪಠ್ಯಕ್ರಮವನ್ನು ನಿರೂಪಿಸಿದೆ.

ಈ ಪಠ್ಯಕ್ರಮವನ್ನು ಶಿಕ್ಷಕ ವೃಂದಕ್ಕೆ ಪರಿಚಯಿಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವ ಸಲುವಾಗಿ ಅದಮ್ಯಚೇತನದ ವಿವೇಕ ಸಭಾಂಗಣದಲ್ಲಿ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು. ದಿನಾಂಕ ೦೩/೦೭/೨೦೨೪ ರಂದು ಬೆಳಿಗ್ಗೆ ೧೦.೩೦ಕ್ಕೆ ಶ್ರೀಮತಿ ವೀಣಾರವರ ಪ್ರಾರ್ಥನೆಯೊಂದಿಗೆ ಕಾರ್ಯಾಗಾರ ಪ್ರಾರಂಭವಾಯಿತು.

ಈ ಕಾರ್ಯಾಗಾರದ ಆಶಯಗಳ ಕುರಿತು ಮುಖ್ಯ ಸಂಚಾಲಕರಾದ ಶ್ರೀ ಟಿ. ಎಸ್. ಗೋಪಾಲರು ದಿಕ್ಸೂಚಿ ಭಾಷಣ ಮಾಡಿದರು. ಸಾಮಾಜಿಕ ಸಂಸ್ಥೆಗಳಾಗಿ ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು ನೀಡುವ ಐತಿಹಾಸಿಕ ಮತ್ತು ಸಾಮಾಜಿಕ ವಿವರಗಳು, ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಪ್ರಾಚೀನ ಕಾಲದಿಂದ ಸ್ವಾತಂತ್ರ್ಯ ಪೂರ್ವಕಾಲದ ವರೆಗಿನ ನಾಯಕತ್ವದ ಮಾದರಿಗಳು ಎಂಬ ನಾಲ್ಕು ವಿಷಯಗಳ ಮೇಲೆ ಪಠ್ಯಗಳನ್ನು ವಿಷಯ ತಜ್ಞರ ಸಹಾಯದಿಂದ ತಯಾರಿಸುವ ಹೊಣೆಗಾರಿಕೆಯನ್ನು ಅನಂತಚೇತನ ವಹಿಸಿಕೊಂಡಿದೆ. ಈ ರೀತಿಯಾಗಿ ಸಿದ್ಧಪಡಿಸಿರುವ ಪಠ್ಯಗಳನ್ನು ಶಿಕ್ಷಕರಿಗೆ ಪರಿಚಯಿಸಿ ಅವರ ಅಮೂಲ್ಯ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಈ ಕಾರ್ಯಾಗಾರದ ಉದ್ದೇಶ ಎಂದು ವಿವರಿಸಿ ಎಲ್ಲ ಶಿಬಿರಾರ್ಥಿಗಳ ಸಹಕಾರವನ್ನು ಅವರು ಕೋರಿದರು.

ಗಣ್ಯ ಅತಿಥಿಗಳಾದ ನಿವೃತ್ತ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್, ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ. ವಿ. ಕೃಷ್ಣ ಭಟ್ಟರು, ಕಾರ್ಯದರ್ಶಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪ್ರಸಿದ್ಧ ಇತಿಹಾಸಕಾರ, ಡಾ. ದೇವರಕೊಂಡಾರೆಡ್ಡಿ ಮತ್ತು ಶ್ರೀ ಟಿ. ಎಸ್. ಗೋಪಾಲರು ದೀಪ ಬೆಳಗುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದರು. ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನ್ಯಾಯಮೂರ್ತಿ, ಎನ್. ಕುಮಾರ್ ಮಾತನಾಡುತ್ತ ಜಗತ್ತಿನಾದ್ಯಂತ ವಿಶಾಲವಾದ ಕಟ್ಟಡಗಳ ನಿರ್ಮಾಣ ಇದೀಗ ನಡೆಯುತ್ತಿದೆ, ಆದರೆ ಒಂದು-ಎರಡು ಸಾವಿರ ವರ್ಷಗಳ ಹಿಂದೆಯೇ ದೊಡ್ಡ ದೊಡ್ಡ ದೇವಾಲಯ ಕಟ್ಟಡಗಳ ನಿರ್ಮಾಣ ನಡೆಯುತ್ತಿದ್ದುದು ನಮಗೆ ಗೊತ್ತಿದೆ. ಈ ಕಟ್ಟಡಗಳ ನಿರ್ಮಾಣದ ತಂತ್ರಜ್ಞಾನ ಅಚ್ಚರಿಯನ್ನು ಹುಟ್ಟಿಸುತ್ತದೆ. ಈ ಕುರಿತ ಅಧ್ಯಯನವು ಪಠ್ಯಕ್ರಮಗಳ ಭಾಗವಾಗದಿರುವುದು ಚರ್ಚೆಯ ವಿಷಯ. ಇದೀಗ ಟಿ.ಎಸ್. ಗೋಪಾಲರ ಸಂಚಾಲಕತ್ವದಲ್ಲಿ, ಶ್ರೀ ದೇವರಕೊಂಡಾರೆಡ್ಡಿಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಈ ಉಪಕ್ರಮ ಸಕಾಲಿಕವಾದದ್ದು ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅನೇಕ ಯುವಕ ಯುವತಿಯರು ಈ ಶಿಬಿರದಲ್ಲಿ ಭಾಗವಹಿಸುತ್ತಿರುವುದು ಆಶಾದಾಯಕ ಎಂದು ಹೇಳುತ್ತಾ ಬೃಹತ್ ಕಟ್ಟಡಗಳು ಜಾಹೀರಾತು ನೀಡುವ ಪ್ರದರ್ಶನ ಸ್ಥಳಗಳಾಗಬಾರದು, ದೇವಾಲಯಗಳ ವಿನ್ಯಾಸ, ನಿರ್ಮಾಣ ಕಾರ್ಯಗಳು ಅಂದಿನ ಸಮಕಾಲೀನ ಜನಜೀವನ ಮತ್ತು ಸಾಮಾಜಿಕ ದರ್ಶನಗಳನ್ನು ಬಿಂಬಿಸುತ್ತವೆ. ಜನರ ಶ್ರೇಷ್ಠ ನಂಬಿಕೆಗಳನ್ನು ಬಿಂಬಿಸುವ ರೀತಿಯಲ್ಲಿ ದೇವಾಲಯ ನಿರ್ಮಾಣಗಳನ್ನು ನಡೆಸಲಾಗಿದೆ ಎಂದು ಹೇಳಿದರು. ಅವರು ಅದಮ್ಯ ಚೇತನದ ಸೇವಾ ಚಟುವಟಿಕೆಗಳ ವಿವರಗಳನ್ನು ನೀಡಿದರು. ಡಾ. ದೇವರಕೊಂಡಾ ರೆಡ್ಡಿಯವರು ಮಾತನಾಡುತ್ತ, ಪಾಶ್ಚಿಮಾತ್ಯ ಧರ್ಮಗಳಾದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಪ್ರಾರ್ಥನಾಗೃಹಗಳಿಗೂ ಭಾರತೀಯ ದೇವಾಲಯಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಿದರು. ನರ್ಮದಾ ನದಿಯನ್ನು ಉತ್ತರದ ಗಡಿಯನ್ನಾಗಿಟ್ಟುಕೊಂಡು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ವಿಶಾಲ ಪ್ರದೇಶವನ್ನು ಕನ್ನಡದ ರಾಜರು ಸುಮಾರು 700 ರಿಂದ 800 ವರ್ಷಗಳವರೆಗೆ ಸತತವಾಗಿ ಆಳಿದರು. ಈ ಪ್ರದೇಶಗಳನ್ನು ವಿಭಿನ್ನರಾಜರು ಆಳಿದರೂ ಇಲ್ಲಿನ ಸಂಸ್ಕೃತಿ ಒಂದೇ ಆಗಿತ್ತು.

ಈ ಕಾಲದಲ್ಲಿ ಆಳಿದ ಮೂರು ಪ್ರಮುಖ ರಾಜ ಮನೆತನಗಳು ಬೇರೆ ಬೇರೆ ರೀತಿಯ ಕಲ್ಲುಗಳನ್ನು ಬಳಸಿ ನಿರ್ಮಾಣ ಕಾರ್ಯ ನಡೆಸಿರುವುದು ಗೋಚರವಾಗುತ್ತದೆ. ಒಂದು ಬೃಹತ್ ಬಂಡೆಯನ್ನು ಶಿಖರದಿಂದ ತಳಪಾಯದ ವರೆಗೆ ಕೊರೆಯುವುದು, ಗುಹಾದೇವಾಲಯಗಳು, ಇಟ್ಟಿಗೆ, ಗಾರೆ, ಕಲ್ಲುಗಳನ್ನು ಬಳಸಿ ನಿರ್ಮಿಸಿದ ದೇವಾಲಯಗಳು - ಹೀಗೆ, ಈ ಕಾಲದಲ್ಲಿ ಅನೇಕ ಪ್ರಯೋಗಗಳು ನಡೆದವು. ಅವರು ದೇವಾಲಯ ನಿರ್ಮಾಣದಲ್ಲಿ ಬಳಸಿದ ತಂತ್ರಜ್ಞಾನವು ಇಂದಿಗೂ ಅಚ್ಚರಿಯ ವಿಷಯವಾಗಿಯೇ ಉಳಿದಿದೆ.

ಅಂದಿನ ಕಾಲದಲ್ಲಿ, ಅದರಲ್ಲೂ ವಿಶೇಷವಾಗಿ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಸಮೃದ್ಧವಾಗಿದ್ದ ಕರ್ನಾಟಕಕ್ಕೆ ಉತ್ತರ ಭಾರತದಿಂದ ರಾಜಕುಮಾರರು, ಶಿಲ್ಪಿಗಳು, ಪಂಡಿತರು ದೊಡ್ಡಮಟ್ಟದಲ್ಲಿ ವಲಸೆ ಬಂದರು. ಈ ಮಹಾ ವಲಸೆಯಿಂದ ಅನೇಕ ಸಾಂಸ್ಕೃತಿಕ ಬದಲಾವಣೆಗಳು ನಡೆದು ಕರ್ನಾಟಕಕ್ಕೆ ಲಾಭವೇ ಉಂಟಾಯಿತು.

ದೇವಾಲಯಗಳ ಜೊತೆಗೆ ಕೆರೆಗಳನ್ನು ಕಟ್ಟುವ ಸಂಸ್ಕೃತಿಯೂ ಬೆಳೆದು ಬಂದಿತು. ಕೆರೆಗಳು ದೇವತೆಗಳ ನೆಲೆಗಳು ಎಂಬ ನಂಬಿಕೆಯ ಜೊತೆಗೆ ಪಶು ಪಕ್ಷಿ ಮನುಷ್ಯರಿಗೆ ಜಲಮೂಲಗಳಾಗಿದ್ದವು, ಇವುಗಳನ್ನು ಬಳಸಿ ಕೃಷಿ ಕಾರ್ಯ ನಡೆಯುವುದರಿಂದ ಜನರಲ್ಲಿ ಸುಖ ಸಂತೋಷಗಳು ನೆಲೆಸುತ್ತಿದ್ದು ರಾಜ್ಯದ ಖಜಾನೆಯೂ ತುಂಬುತ್ತಿತ್ತು ಎಂದು ಅವರು ತಿಳಿಸಿದರು.

ನಂತರ ಕಾರ್ಯಾಗಾರದಲ್ಲಿ ಭಾಗವಹಿಸಿದ ಶಿಕ್ಷಕರನ್ನು ಐದು ಗುಂಪುಗಳಾಗಿ ವಿಂಗಡಿಸಿ, ಈ ಗುಂಪುಗಳಲ್ಲಿ, ಸಂಪನ್ಮೂಲ ವ್ಯಕ್ತಿಗಳಾದ ಡಾ. ದೇವರಕೊಂಡಾರೆಡ್ಡಿ, ಶ್ರೀ ಟಿ. ಎಸ್. ಗೋಪಾಲ್, ಶ್ರೀ ನರಸಿಂಹನ್, ಶ್ರೀ ಎಂ. ಎನ್. ಪ್ರಭಾಕರ್ ಮತ್ತು ಶ್ರೀ ಕೆಂಗೇರಿ ಚಕ್ರ ಪಾಣಿಯವರ ನೇತೃತ್ವದಲ್ಲಿ ವಿಷಯತಜ್ಞರು ಸಿದ್ಧಪಡಿಸಿದ 38 ಪ್ರಬಂಧಗಳನ್ನು ಪರಾಮರ್ಶಿಸಲಾಯಿತು ಹಾಗೂ ಪ್ರತಿಯೊಂದು ಪ್ರಬಂಧಕ್ಕೂ ಪ್ರಶ್ನಾವಳಿಗಳನ್ನು ತಯಾರಿಸಲಾಯಿತು.

ಕೊನೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಹಲವಾರು ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಂಡರು. ಪ್ರತಿಯೊಬ್ಬರೂ ತಮ್ಮ ಶಿಕ್ಷಣ ಕ್ಷೇತ್ರದ ಅನುಭವಗಳ ಹಿನ್ನೆಲೆಯಲ್ಲಿ ಅಮೂಲ್ಯವಾದ ಸಲಹೆಗಳನ್ನೂ ನೀಡಿದರು. ಪ್ರಸಿದ್ಧ ವಿದ್ವಾಂಸರಾದ ಶ್ರೀ ಎಂ. ಎನ್. ಪ್ರಭಾಕರ್ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಇಡೀ ಕಾರ್ಯಾಗಾರವನ್ನು ಅಚ್ಚುಕಟ್ಟಾಗಿ ನಿರೂಪಿಸಿದ ಶ್ರೀ ಪೂರ್ಣಪ್ರಜ್ಞರವರು ವಂದನಾರ್ಪಣೆಯನ್ನೂ ಮಾಡಿದರು.

ಎಲ್ಲ ಶಿಬಿರಾರ್ಥಿಗಳೂ ಅದಮ್ಯಚೇತನ ಸಂಸ್ಥೆಯ ಶೂನ್ಯತ್ಯಾಜ್ಯ ಅಡುಗೆ ಮನೆಯನ್ನೂ ವೀಕ್ಷಿಸಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲರಿಗೂ ಕಾರ್ಯಕ್ರಮದ ಕೊನೆಯಲ್ಲಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ◆

# ಹರಿದಾಸ ಕವಯಿತ್ರಿ- ಅಂಬಾಬಾಯಿ

ವ್ಯಕ್ತಿ ವಿಶೇಷ ಮಾಲಿಕೆ

- ಕೆ. ಜನಾರ್ದನ ತುಂಗ



ಕನ್ನಡ ನಾಡಿನಲ್ಲಿ ರಾಣಿ ಅಬ್ಬಕ್ಕ, ಕೆಳದಿ ಚೆನ್ನಮ್ಮ, ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮರಂತಹ ಕ್ಷಾತ್ರವನ್ನು ಮೆರೆದ ವೀರರಮಣಿಯರಲ್ಲದೆ ಆಧ್ಯಾತ್ಮಿಕ ಔನ್ನತ್ಯಕ್ಕೇರಿದ ಅಕ್ಕ ಮಹಾದೇವಿ, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮನವರಂತಹ ಧೀರಸನ್ಯಾಸಿನಿಯರೂ ಆಗಿಹೋಗಿದ್ದಾರೆ. ಈ ಧೀರಸನ್ಯಾಸಿನಿಯರ ಸಾಲಿನಲ್ಲಿ ಹೆಸರಿಸಬಹುದಾದ ಅಪರೂಪದ ವ್ಯಕ್ತಿತ್ವದ ಮಹಿಳೆ, ಹರಿದಾಸಿ ಅಂಬಾಬಾಯಿಯವರು.

೧೯೦೨ರಲ್ಲಿ ಚಿತ್ರದುರ್ಗದ ಬಡಕುಟುಂಬದಲ್ಲಿ ಭೀಮಸೇನರಾಯರು ಹಾಗೂ ಭಾರತೀಬಾಯಿಯವರ ಪುತ್ರಿಯಾಗಿ ಜನನ, ನಾಲ್ಕನೆಯ ತರಗತಿಯವರೆಗೆ ಓದು, ೧೦ ವರ್ಷಕ್ಕೆ ಚಿತ್ರದುರ್ಗದ ಸಮೀಪದ ಗೋಪಾಲಪುರದ ಶ್ರೀಮಂತ ಮನೆತನದ ೨೨ ವರ್ಷದ ಹನುಮಂತಾಚಾರ್ಯರ ಜೊತೆ ಮದುವೆ, ೧೨ನೇ ವಯಸ್ಸಿಗೆ ಗರ್ಭಪಾತ, ೧೩ ವರ್ಷಕ್ಕೆ ಪತಿ ಮತ್ತು ತಂದೆ ಇಬ್ಬರೂ ಪ್ಲೇಗ್ ಮಹಾಮಾರಿಗೆ ಬಲಿ, ಕೇಶಮುಂಡನ, ಕೆಂಪು ಮಡಿ ಧಾರಣೆ. ವೈಧವ್ಯದ ಜೊತೆಗೆ ತಂದೆಯಿಲ್ಲದ ತವರಿಗೆ ಬಂದರೆ ಅಲ್ಲಿಯೂ ಕಿತ್ತು ತಿನ್ನುವ ಬಡತನ! ಇಷ್ಟು ಕೇಳುವಾಗ ಎಂಥ ದಾರುಣ ಜೀವನ, ವಿಧಿ ಎಷ್ಟು ಕ್ರೂರಿ ಎಂದೆಲ್ಲ ಅನಿಸುವುದು ಸಹಜ. ಆದರೆ, ಅಂಕಿತವನ್ನು ಪಡೆದ ಹರಿದಾಸರ ಕುಟುಂಬದಲ್ಲಿ ಜನಿಸಿದ ಅಂಬಾಬಾಯಿಯವರು ಬಾಲ್ಯದಲ್ಲಿಯೇ ಎಲ್ಲವೂ 'ಹರಿಚಿತ್ತ' ಎಂದು ಭಾವಿಸುವ ಮಟ್ಟದ ಅನಾಸಕ್ತಿ ಬೆಳೆಸಿಕೊಂಡಿದ್ದರು. ತಮ್ಮ ಬದುಕಿನ ದುಃಸ್ಥಿತಿಯನ್ನು ನೋಡಿ ಅಂಬಾಬಾಯಿ ಧೃತಿಗೆಡಲಿಲ್ಲ, ತನ್ನನ್ನು ತಾನು ಮೂಲೆಗುಂಪು ಮಾಡಿಕೊಳ್ಳಲಿಲ್ಲ. ತವರಿಗೆ ಮರಳಿದ ಅಂಬಾಬಾಯಿಯವರು ತಂಗಿಯ ಮತ್ತು ತಮ್ಮನ ಮನೆಯಲ್ಲಿ ಆಶ್ರಯ ಪಡೆದರೂ ತಮ್ಮ ಪರಿಚಿತ ನೆಂಟರಿಷ್ಟರ ಮನೆಯ ಮದುವೆ, ಬಾಣಂತನ ಮತ್ತು ಇನ್ನಿತರ ಸನ್ನಿವೇಶಗಳಲ್ಲಿ ನಿಃಸ್ವಾರ್ಥದಿಂದ ಚಾಕರಿ ಮಾಡಿದರು. ಎಲ್ಲ ವರ್ಗಗಳ ಜನರಿಗೆ ತಮ್ಮ ವಾತ್ಸಲ್ಯವನ್ನು ಧಾರೆಯೆರೆದರು. ಸೇವೆಯ ಅರ್ಥ ಕಂಡುಕೊಂಡ ಅವರಿಗೆ ಬದುಕು ಸಹ್ಯವಾಯಿತು.

ಅವರು ಪತಿಯ ನಿಧನದ ನಂತರದ ತಮ್ಮ ೧೬ ವರ್ಷಗಳನ್ನು ಅವರಿವರ ಸೇವೆಯಲ್ಲಿ ಮತ್ತು ಅಧ್ಯಯನದಲ್ಲಿಯೇ ಕಳೆದರು. ಸಾಹಿತ್ಯವನ್ನು ಅರಗಿಸಿಕೊಂಡರು. ೧೧೬೮ ಜನರಿಗೆ ಅಂಕಿತವನ್ನು ದಯಪಾಲಿಸಿದ ದಾಸಶ್ರೇಷ್ಠರಾದ ಪರಮಪ್ರಿಯ ಸುಬ್ಬರಾಯ ದಾಸರು ಒಮ್ಮೆ ದೇವರಾಯನದುರ್ಗಕ್ಕೆ ಆಗಮಿಸಿದಾಗ ೨೯ ವರ್ಷದ ಅಂಬಾಬಾಯಿಯವರೂ ಅಲ್ಲಿದ್ದರು. ಅಂಬಾಬಾಯಿಯವರ ಧರ್ಮಶ್ರದ್ಧೆ, ಸಾಹಿತ್ಯದ ಜ್ಞಾನ ಮತ್ತು ಭಾಷೆಯ ಮೇಲಿನ ಹಿಡಿತವನ್ನು ಅವರು ಗಮನಿಸಿದ್ದರು. ನಂತರ ಅವರು ಅಂಬಾಬಾಯಿಯವರ ಮನೆಗೆ ಬಂದು "ಗೋಪಾಲಕೃಷ್ಣ ವಿಠಲ" ಎಂಬ ಅಂಕಿತವನ್ನು ನೀಡಿ ಆಶೀರ್ವದಿಸಿದರು. ಕಾಕತಾಳೀಯವೆಂಬಂತೆ ಅಂಬಾಬಾಯಿಯವರು ಅತ್ತೆಯ ಮನೆಯಿಂದ ಹೊರನಡೆದಾಗ ಅವರ ಮನೆಯಲ್ಲಿದ್ದ ಪುಟ್ಟ ಗೋಪಾಲಕೃಷ್ಣನ ಕಂಚಿನ ವಿಗ್ರಹವನ್ನು ಬೇಡಿ ಪಡೆದಿದ್ದರು! ಹೀಗೆ ಗುರುವಿನಿಂದ ದೀಕ್ಷೆ ಪಡೆದ ಅಂಬಾಬಾಯಿಯವರಿಗೆ ತಾವು ಜೀವನದಲ್ಲಿ ಅರಸುತ್ತಿದ್ದ ಪರಮನಿಧಿ ದೊರೆತಂತೆ ಸಂತೋಷವಾಯಿತು. "ಮುತ್ತೈದೆಯಾದೆ ನಾ ಮುರವೈರಿ ದಯದಿ, ನಿತ್ಯತೃಪ್ತನು ಎನ್ನ ನಿಜಕರವ ಪಿಡಿಯೆ" ಎಂದು ಹಾಡಿದ ಅವರು "ಅಂಕಿತವೇ ಮಾಂಗಲ್ಯ, ನಾಮವೇ ತಿಲಕ, ಗುರುಕರುಣವೇ ಕವಚ, ಗುರು ಪ್ರೀತಿಯೇ ವಸನ, ಭಕ್ತಿ - ಜ್ಞಾನ - ವೈರಾಗ್ಯಗಳೇ ಮೂರು ಕಾಲಿನ ಜಡೆ, ತತ್ವಗಳೇ ಚೌರಿ, ರಾಗುಟೆ, ಗೊಂಡುಗಳು, ಶ್ರವಣವೇ ಕರ್ಣಕುಂಡಲ, ನಿರ್ಮಾಲ್ಯವೇ ನಾಸಿಕಾಭರಣ, ಭಕ್ತಿಯೇ ನಡುವಿನೊಡ್ಯಾಣ, ಸದ್ಗುಣಗಳೇ ಪಾದಾಭರಣ, ಗುರುವಿನ ಅನುಗ್ರಹವೇ ಮಂಗಳ ದ್ರವ್ಯಗಳೆನ್ನುತ್ತಾ, ಹೀಗೆ ಸಾಲಂಕೃತಳಾದ ತನ್ನನ್ನು ಶ್ರೀಹರಿಗೆ ಧಾರೆಯೆರೆದು ಕೊಡಲಾಯಿತೆಂದು ತಮ್ಮ ಒಂದು ಕೀರ್ತನೆಯಲ್ಲಿ ವಿವರಿಸಿದ್ದಾರೆ.

ಅಂಕಿತವನ್ನು ಪಡೆದ ತರುಣದಲ್ಲಿ ಗುರುವನ್ನೇ ತಮ್ಮ ತಂದೆ, ತಾಯಿ ಎಂದು ಪರಿಗ್ರಹಿಸಿದ ಅಂಬಾಬಾಯಿ, ಅವರ ಮಹಿಮೆಯನ್ನು ಹಾಡಿ ಹೊಗಳುವ ೫೫ ಕೀರ್ತನೆಗಳನ್ನು ಬರೆದರು. ಗುರುವಿನ ಮೂಲಕ ಸಂಸ್ಕೃತ ಸಾಹಿತ್ಯದ ಪರಿಚಯವನ್ನೂ ಪಡೆದರು. ಗುರುಗಳೇ ಪ್ರಕಟಿಸುತ್ತಿದ್ದ "ಪಾರಮಾರ್ಥಿಕ ಚಂದ್ರೋದಯ" ಎಂಬ ಮಾಸಿಕದಲ್ಲಿ ಅವರ ಕೃತಿಗಳು ಪ್ರಕಟವಾಗತೊಡಗಿದವು. ಜೊತೆಗೆ, ತಾವು ರಚಿಸಿದ ಕೀರ್ತನೆಗಳ ಹಲವು ಪ್ರತಿಗಳನ್ನು ಮಾಡಿ ತಮ್ಮ ಪರಿಚಿತರಿಗೆ ಹಂಚುತ್ತಿದ್ದರು.

ಗುರುವಿನಿಂದ ಅನುಗೃಹೀತರಾದ ಅಂಬಾಬಾಯಿಯವರು ಹರಿದಾಸರಂತೆ ಜೀವನವನ್ನು ನಡೆಸುವ ಸಂಕಲ್ಪವನ್ನು ತೊಟ್ಟರು. ಕಾವಿ ಬಟ್ಟೆ, ಕಾಲಿಗೆ ಗೆಜ್ಜೆ, ಕೊರಳಿಗೆ ತುಳಸೀ ಮಾಲೆ, ಬಗಲಿಗೆ ತಂಬೂರಿ, ಜೋಳಿಗೆ ಇತ್ಯಾದಿ ಪರಿಕರಗಳನ್ನು ಧರಿಸಿ ಹರಿದಾಸರಾಗಿ ಸಂಚರಿಸತೊಡಗಿದರು. "ಬಲು ಬಲು ಪರಿಯಲಿ ಹರಿದಾಸತ್ವಕೆ ಬರುವಂತೆ ಮಾಡಿದ ತಂಬೂರಿ"ಯನ್ನು ಸಂಗಾತಿಯನ್ನಾಗಿ ಮಾಡಿಕೊಂಡು ಕರಿಗಿರಿ, ಕದರಮಂಡಲಗಿ, ತಿರುಪತಿ, ಉಡುಪಿ, ಪಂಡರಾಪುರ, ಮಂತ್ರಾಲಯ, ಹಂಪೆ, ಸವಣೂರು, ರಿತ್ತಿ, ಭದ್ರಾವತಿ, ಮೊದಲ ಘಟ್ಟ, ಸಾಗರಕಟ್ಟೆ, ಶ್ರೀರಂಗಪಟ್ಟಣ, ತಿರುಮಕೂಡಲು, ನಂಜನಗೂಡು, ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿದರು. ಅಂಬಾಬಾಯಿಯವರ ಜೀವನದ ಪ್ರಮುಖ ಘಟನೆಯೆಂದರೆ ಅವರು ೧೯೩೮-೩೯ರಲ್ಲಿ ವಿಜಯದಾಸರ ಪುಣ್ಯದಿನದಂದು ಬೆಂಗಳೂರಿನಿಂದ ಕದರಮಂಡಲಗಿಯವರೆಗೆ ಕೈಗೊಂಡ ೮೧ ದಿನಗಳ ಪಾದಯಾತ್ರೆ. 'ಸಾಲವನ್ನು ಮಾಡಬೇಡ, ಸಾಲದೆಂದೆನಬೇಡ, ನಾಳೆಗೆಂದಿಡಬೇಡ' ಎಂಬ ಉಂಛವ್ರತದ ತತ್ತ್ವವನ್ನು ಪಾಲಿಸುತ್ತ ತಾಳ, ತಂಬೂರಿ, ಬವನಾಸಿಗಳನ್ನು ಹಿಡಿದು ಯಾಯವಾರದ ಬದುಕನ್ನು ನಡೆಸಿದರು. ಉಡಲು ಒಂದು ಜೊತೆ ಬಟ್ಟೆ, ನದಿ, ಕೆರೆಗಳಲ್ಲಿ ಸ್ನಾನ, ದಿನಕ್ಕೆ ಆರು ಮನೆಗಳಿಂದ ಗೋಪಾಳ, ಅದನ್ನು ಸ್ವಂತ ಬೇಯಿಸಿಕೊಂಡೋ, ದೇವಸ್ಥಾನಕ್ಕೆ ನೀಡಿ ಅಲ್ಲಿನ ಪ್ರಸಾದವನ್ನು ಸ್ವೀಕರಿಸಿಯೋ ಹೊಟ್ಟೆ ತುಂಬಿಸಿಕೊಳ್ಳುವುದು, ದೇವಾಲಯಗಳ ಜಗಲಿಯ ಮೇಲೆ ರಾತ್ರಿಗಳನ್ನು ಕಳೆಯುವುದು ಅವರ ಅಂದಿನ ನಿತ್ಯವಿಧಿಯಾಗಿತ್ತು. ಹರಿದಾಸ ಸಂಘಗಳ ಸ್ಥಾಪನೆ, ಕೀರ್ತನೆಗಳನ್ನು ರಚಿಸಿ ಹಾಡಿಸುವುದು, ಹಾಡು-ನೃತ್ಯಗಳ ಮೂಲಕ ಹರಿದಾಸ ಸಾಹಿತ್ಯದ ಪ್ರಚಾರ ಮುಂತಾದವುಗಳು ಅವರ ದೈನಂದಿನ ಚಟುವಟಿಕೆಗಳಾಗಿದ್ದವು. ಈ ೮೧ ದಿನಗಳ ಯಾತ್ರೆಯ ವಿವರಗಳನ್ನು ೫೩ ಪುಟಗಳ ಫುಲ್‌ಸ್ಕೇಪ್ ಹಾಳೆಗಳ ದಿನಚರಿಯಲ್ಲಿ ದಾಖಲಿಸಿರುವುದು ಒಂದು ವಿಶೇಷ.

ಅಂಬಾಬಾಯಿಯವರು ನಾವರಿಯದ ಬಹುಪಾಲು ಪ್ರಥಮಗಳಿಗೆ ಭಾಜನರಾಗಿದ್ದಾರೆ. ಅವರು ಕೀರ್ತನೆಗಳನ್ನು ಮುದ್ರಿಸಿದ ಪ್ರಥಮ ಮಹಿಳೆ (೧೯೩೬). ತಮ್ಮ ಹಿಂದಿನ ಎಲ್ಲ ಪ್ರಸಿದ್ಧ ಕವಯಿತ್ರಿಯರಿಗಿಂತ ಹೆಚ್ಚು ಕೀರ್ತನೆಗಳನ್ನು (೪೧೭) ರಚಿಸಿದ ಕೀರ್ತಿ ಇವರದು. ಕನ್ನಡದಲ್ಲಿ ಮಹಾಕಾವ್ಯವನ್ನು ಬರೆದ ಮೊದಲ ಕವಯಿತ್ರಿ. ಕುವೆಂಪುರವರಿಗಿಂತ ೧೩ ವರ್ಷ ಮೊದಲೇ ಕಾವ್ಯರಚನೆಗೆ ತೊಡಗಿದ್ದ ಅಂಬಾಬಾಯಿಯವರು ಕುಸುಮ ಷಟ್ಪದಿಯಲ್ಲಿ ೨೫೦೧ ಪದ್ಯಗಳನ್ನೊಳಗೊಂಡ ಶ್ರೀರಾಮ ಕಥಾಮೃತವನ್ನು ಬರೆದರು (೧೯೩೬-೩೭). ಪುರಂದರ, ಕನಕ, ವಿಜಯದಾಸರಂತೆ ಹಾಡುತ್ತ ಕುಣಿಯುತ್ತ ಹರಿದಾಸ ವೃತ್ತಿ ನಡೆಸಿದ ಮೊದಲ ಮಹಿಳೆ ಇವರು.

ಅಪಾರವಾದ ಪದಸಂಪತ್ತು, ಅದ್ಭುತ ಲಯ, ಕುಮಾರವ್ಯಾಸನಂತೆ ಪುನರುಕ್ತಿಯಿಲ್ಲದೆ ಕಾವ್ಯರಚನೆಯ ಪ್ರತಿಭೆ, ಛಂದಸ್ಸಿನ ತಿಳುವಳಿಕೆಯನ್ನು ಹೊಂದಿದ್ದ ಅಂಬಾಬಾಯಿಯವರು ರಚಿಸಿದ ಸುಮಾರು ೧೭ ಕೃತಿಗಳು ಲಭ್ಯವಾಗಿವೆ. ತತ್ವಸಾರಾಮೃತ, ಭಾಗವತಸಾರೋದ್ಧಾರ, ಚಾಮುಂಡಿಸ್ತುತಿ, ಶ್ರೀರಾಮಕಥಾಮೃತ ಮುಂತಾದ ೧೭ ದೀರ್ಘಕೃತಿಗಳು ಮತ್ತು ೪೧೭ ಕೀರ್ತನೆಗಳನ್ನು ಇವರು ರಚಿಸಿದ್ದಾರೆ. ಸಂಖ್ಯೆಗಳನ್ನೇ ಬಳಸಿಕೊಂಡ ಅನೇಕ ಮುಂಡಿಗೆಗಳನ್ನೂ ಇವರು ರಚಿಸಿದ್ದಾರೆ. ಡಾ. ಶಾಂತಾ ನಾಗರಾಜರು ತಮ್ಮ ಪಿಎಚ್‌ಡಿಗಾಗಿ ಅಂಬಾಬಾಯಿಯವರ ಜೀವನ ಮತ್ತು ದರ್ಶನಗಳನ್ನು ಆರಿಸಿಕೊಂಡು "ಮಹಿಳಾ ಹರಿದಾಸರು- ಅಂಬಾಬಾಯಿ, ಒಂದು ಅಧ್ಯಯನ" ಎಂಬ ಸಂಪ್ರಬಂಧವನ್ನು ಬರೆದಿದ್ದಾರೆ. ಪ್ರಸಿದ್ಧ ವಿದುಷಿ, ಡಾ. ಟಿ. ಎಸ್. ಸತ್ಯವತಿಯವರು ಅಂಬಾಬಾಯಿಯವರ ಜೀವನ ಮತ್ತು

ಪುಟ 8 ರಲ್ಲಿ ಮುಂದುವರಿದಿದೆ

ಪುಟ 7 ರಿಂದ ರಚನೆಗಳ ಕುರಿತು ಉಪನ್ಯಾಸ-ಪ್ರಾತ್ಯಕ್ಷಿಕೆ (LEC-DOC) ನೀಡಿದ್ದಾರೆ. ಮಂಗಳೂರು ವಿವಿಯಲ್ಲಿ ಅಂಬಾಬಾಯಿಯವರ ಜೀವನ ಮತ್ತು ಕೃತಿಗಳು ಪಿಎಚ್‌ಡಿಗೆ ಅಧಿಕೃತ ವಿಷಯಗಳಾಗಿವೆ. ಸೇಲಂ ಯೂನಿವರ್ಸಿಟಿಯೂ ಸೇರಿದಂತೆ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಅವರ ಕೃತಿಗಳು ಅಧ್ಯಯನದ ವಸ್ತುವಾಗಿದೆ. ಅವರ ಅಭಿಜಾತ ಪ್ರತಿಭೆಯ ಬಗೆಗೆ, ಆಶುಕವಿತ್ವದ ಬಗೆಗೆ ಒಂದು ದೃಷ್ಟಾಂತವಿದೆ. ಒಮ್ಮೆ ಕುಣಿಗಲ್ಲಿನಲ್ಲಿದ್ದ ಅಂಬಾಬಾಯಿಯವರ ತಂಗಿ, ಪಕ್ಕದ ಮನೆಯ ಮಹಿಳೆಯು ಹಾಡುತ್ತಿದ್ದ ಜೋಗುಳವನ್ನು ಕೇಳಿಸಿಕೊಂಡು ತನಗೂ ಅದನ್ನು ಬರೆದುಕೊಡಿ ಎಂದು ಆಸೆಯಿಂದ ಕೇಳಿಕೊಂಡಾಗ ಅವರು ನಿರಾಕರಿಸಿದರಂತೆ. ಇದನ್ನು ಅವರು ಅಕ್ಕನ ಹತ್ತಿರ ಹೇಳಿಕೊಂಡರು. ಮರುದಿನ ಬೆಳಗಿನ ಮೂರುಗಂಟೆಗೆ ಎಚ್ಚರಗೊಂಡ ತಂಗಿ, ದೇವರ ಮನೆಯಲ್ಲಿ ದೀಪ ಉರಿಯುತ್ತಿದ್ದುದನ್ನು ಗಮನಿಸಿ ಅಲ್ಲಿಗೆ ಹೋದರು. ಆ ವೇಳೆಯಲ್ಲಿ ಅಂಬಾಬಾಯಿಯವರು ಎದ್ದು ಸ್ನಾನ ಮಾಡಿ, ಒದ್ದೆಬಟ್ಟೆಯುಟ್ಟು, ದೇವರಿಗೆ ಹಚ್ಚಿದ ಹಣತೆಯ ಬೆಳಕಿನಲ್ಲಿ ಬರೆಯುತ್ತಿದ್ದರು! ಬೆಳಗಾಗುವ ಹೊತ್ತಿಗೆ ೩೮೯ ಪದ್ಯಗಳಲ್ಲಿ ಶ್ರೀಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವ ಅದ್ಭುತವಾದ ಜೋಗುಳ ಹಾಡನ್ನು ಬರೆದು ತಂಗಿಗೆ ಅರ್ಪಿಸಿದ್ದರು!

ಈ ರೀತಿಯಾಗಿ ಗಂಧದಂತೆ ಜೀವನವನ್ನು ತೇಯ್ದು, ಕರ್ಪೂರದಂತೆ ಉರಿದು ಹೋದ ಅಂಬಾಬಾಯಿಯವರು ತೀರ್ಥಯಾತ್ರೆಯಲ್ಲಿ ನಿರತರಾಗಿದ್ದಾಗಲೇ ತಮ್ಮ ೪೪ನೇ ವಯಸ್ಸಿನಲ್ಲಿ ಅಂದರೆ ೧೯೪೬ರಲ್ಲಿ ನಿಧನರಾದರು. ಅವರು ಎಂದು, ಎಲ್ಲಿ, ಹೇಗೆ ತೀರಿಕೊಂಡರು ಎಂಬುದು ಹತ್ತಿರದ ಸಂಬಂಧಿಗಳಿಗೂ ತಿಳಿಯಲಿಲ್ಲ. ಕಾವೇರಿ ನದಿಯಲ್ಲಿ ಸ್ನಾನ ಮಾಡುವಾಗ ಜಲಸಮಾಧಿಯಾದರು ಎಂಬುದು ಜನರ ನಂಬಿಕೆ.

ಕಷ್ಟಗಳಿಗೆ ಅಂಜಿ ಬದುಕಿನಿಂದ ವಿಮುಖರಾಗುವ ದುರ್ಬಲಜೀವಿಗಳಿಗೆ ಅಂಬಾಬಾಯಿಯವರ ಜೀವನದ ಪರಿಚಯ ಸ್ಥೈರ್ಯ ನೀಡಬಹುದು. ◆

# ಶ್ರದ್ಧಾಂಜಲಿ



ಅಪರೂಪದ ವ್ಯಕ್ತಿತ್ವದ ಅಪ್ಪಟ ಕನ್ನಡತಿ ಅಪರ್ಣಾ ವಸ್ತಾರೆ (1966 - 2024) ಇನ್ನಿಲ್ಲ. ಕನ್ನಡದ ಪ್ರಮುಖ ವಾಹಿನಿಗಳ ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ನಿರೂಪಣೆ ಮಾಡುತ್ತಾ ನಾಡಿನ ಮನೆಮಾತಾಗಿದ್ದ ಬಹುಮುಖ ಪ್ರತಿಭೆ, ಶ್ರೀಮತಿ ಅಪರ್ಣಾ ಅವರ ನಿಧನವು ಒಂದು ಶೂನ್ಯವನ್ನು ಸೃಷ್ಟಿಸಿದೆ.

2006-07 ರಿಂದ ಪ್ರತಿವರ್ಷ ನಿರಂತರವಾಗಿ ನಡೆಯುತಿದ್ದ ಸೇವಾ ಉತ್ಸವಕ್ಕೆ ಅವರ ಸಮ್ಮೋಹಕ ಧ್ವನಿಯು ವಿಶಿಷ್ಟ ಮೆರುಗು ನೀಡುತ್ತಿತ್ತು. ಅಪರ್ಣಾ ಅವರ ನಿರೂಪಣೆಯನ್ನು ಮೆಚ್ಚಿಕೊಂಡಿದ್ದ ಶ್ರೀ ಅನಂತಕುಮಾರ್, ಕರ್ನಾಟಕದ ರಾಜ್ಯದ ಪ್ರಮುಖ ಕಾರ್ಯಕ್ರಮಗಳಾದ ಹಂಪಿ ಉತ್ಸವ, ದಸರಾ ಉತ್ಸವ, ಪಕ್ಷದ ಕಾರ್ಯಕ್ರಮಗಳು ಹಾಗೂ ಪ್ರಧಾನಮಂತ್ರಿ - ರಾಷ್ಟ್ರಪತಿ ಭೇಟಿ ಮುಂತಾದ ಯಾವುದೇ ಪ್ರಮುಖ ಕಾರ್ಯಕ್ರಮಗಳ ನಿರೂಪಣೆಗಾಗಿ ಅಪರ್ಣಾ ಅವರನ್ನೇ ನಿಯೋಜಿಸುತ್ತಿದ್ದರು.

ಅಪರ್ಣಾ ಕನ್ನಡದ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದ ಸಹೃದಯಿಯಾಗಿ ಚಿರಸ್ಮರಣೀಯರು. ಅದಮ್ಯ ಚೇತನದ ಹಾಗೂ ಅನಂತಕುಮಾರ್ ಪ್ರತಿಷ್ಠಾನದ ಕಿರುಚಿತ್ರಗಳಲ್ಲಿ ಅಪರ್ಣಾ ನೀಡಿದ ಹಿನ್ನೆಲೆಯ ಧ್ವನಿ ನಮ್ಮ ಎಲ್ಲ ಚಟುವಟಿಕೆಗಳಿಗೆ ಪ್ರೇರಣೆಯಾಗಿ ಉಳಿಯಲಿದೆ. ಅಂತೆಯೇ, ಅಪರ್ಣಾ 'ನಮ್ಮಮೆಟ್ರೋ' ದಲ್ಲಿ ಸಹಯಾತ್ರಿಯಾಗಿ ಸದಾ ನಮ್ಮ ಜೊತೆಗೆ ಇರುತ್ತಾರೆ. ಅಪರ್ಣಾ ಅವರಿಗೆ ಸಲ್ಲಿಸಿದ ಅಂತಿಮ ಪುಷ್ಪಗಳನ್ನು ವ್ಯರ್ಥಮಾಡದೆ, ಅವುಗಳಿಂದ ಗೊಬ್ಬರ ತಯಾರಿಸಿ ಹೂಗಿಡಗಳ ಪೋಷಣೆಗೆ ಬಳಸಿಕೊಳ್ಳುವ ಮೂಲಕ ಅದಮ್ಯ ಚೇತನವು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿದೆ. ಅಪರ್ಣಾ ಅವರ ನಿಧನಕ್ಕೆ 'ಅನಂತಪಥ' ಸಂತಾಪ ವ್ಯಕ್ತಪಡಿಸುತ್ತದೆ.

**- ತೇಜಸ್ವಿನಿ ಅನಂತಕುಮಾರ್**

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಜೂನ್ ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ ಮ:2.00 ರಿಂದ 3.00 | 4500 | 2,02,200 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ:12.30 ರಿಂದ 1.30 | 3000 | 1,32,800 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ:12.30 ರಿಂದ 1.30 | 2500 | 1,13,000 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ:12.30 ರಿಂದ 1.30 | 4500 | 82,650 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ:12:30ರಿಂದ 1:30ರವರೆಗೆ | 4500 | 38,420 |
| | ಒಟ್ಟು ಅಂದಾಜು | **19,000** | **5,69,070** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **442** **16/06/24** | ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಶಿಕಾರಿಪಾಳ್ಯ ಕೆರೆಯ ಆವರಣ | ತೇಜಸ್ವಿನಿ ಅನಂತ್ ಕುಮಾರ್, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಮುಖಂಡರಾದ ಮಣಿರಂಜನ್, ಇಶಾನ್, ಸುತ್ತಪ್ಪ, ರಾಕೇಶ್ ಹಾಗೂ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳು, ಹಸಿರು ಯೋಧರು ಉಪಸ್ಥಿತರಿದ್ದರು | ವಿವಿಧ ಜಾತಿಯ 50 ಗಿಡಗಳನ್ನು ನೆಡಲಾಯಿತು. |
| **443** **23/06/24** | ಬೆಂಗಳೂರಿನ ಗಾಂಧಿ ಸಂಶೋಧನಾ ಕೇಂದ್ರದ ಬಳಿ ಇರುವ ಬೆಂಗಳೂರು ವಿಶ್ವವಿದ್ಯಾಲಯ ಬಯೋ ಪಾರ್ಕ್ ಆವರಣ | ಕೆಪಿಐಟಿ ಯ ಕಂಪನಿಯ ಉದ್ಯೋಗಿಗಳು, ಅಮೃತವರ್ಷಿಣಿ ಗಾಯನತಂಡ, ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು ಭಾಗಿಯಾಗಿದ್ದರು | ನಾನಾ ಜಾತಿಯ 25 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |
| **444** **30/06/24** | ಬೆಂಗಳೂರಿನ ಶಂಕರಪುರದ ಶಂಕರಮಠ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಪ್ರತಿಭಾ ಓಕ್, ಶ್ರೀ ಜಿ.ಎಂ. ಇನಾಂದಾರ್, ಎಸ್ ಬಿ ಎಂ ಜಿ ಇ ಸಿ ರೋಟರಾಕ್ಟ್ ಸದಸ್ಯರು, ಯುತ್ ಫಾರ್ ಸೇವಾ, ಹಸಿರು ಯೋಧರು ಹಾಗೂ ಸ್ಥಳೀಯರು ಪಾಲ್ಗೊಂಡಿದ್ದರು. | ವಿವಿಧ ಜಾತಿಯ ಹಣ್ಣುಗಳ 12 ಗಿಡಗಳನ್ನು ನೆಡಲಾಯಿತು. |
| **445** **07/07/24** | ಕನಕಪುರ ಜಿಲ್ಲೆಯ ಹಾರೋಹಳ್ಳಿ ತಾಲೂಕಿನ ಚಿಕ್ಕಮರಳವಾಡಿ ಗ್ರಾಮ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮಹೇಂದ್ರ ಮೆಹತಾ, ನಚೀಕೇತ್, ಹೇಮಂತ್ ಬೆಂಗಾನಿ, ಮನೋಜ್ ಬೋತ್ರಾ, ಕೈಲಾಸ್ ಹಾಗೂ ತಂಡದ ಸದಸ್ಯರು, ನೃಪತುಂಗ ಕಾಲೇಜು ಹಾಗೂ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಎನ್. ಪ್ರಕಾಶ್ ಹಾಗೂ ಅದಮ್ಯ ಚೇತನದ ಸ್ವಯಂ ಸೇವಕರು ಹಾಗೂ ಸ್ಥಳೀಯರು. | ವಿವಿಧ ಜಾತಿಯ 50 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |
| **446** **14/07/24** | ಬೆಂಗಳೂರಿನ ಗಾಂಧಿ ಸಂಶೋಧನಾ ಕೇಂದ್ರದ ಬಳಿ ಇರುವ ಬೆಂಗಳೂರು ವಿಶ್ವವಿದ್ಯಾಲಯ ಬಯೋ ಪಾರ್ಕ್ ಆವರಣ | ಬಿ ಎಂ ಎಸ್ ಕಾಲೇಜು, ಪಿ. ಇ. ಎಸ್. ಕಾಲೇಜು, ಕೆಪಿಐಟಿ ಕಂಪನಿಯ ಉದ್ಯೋಗಿಗಳು, ಯುತ್ ಫಾರ್ ಸೇವಾ, ಹಸಿರು ಯೋಧರು ಹಾಗೂ ಸ್ಥಳೀಯರು ಪಾಲ್ಗೊಂಡಿದ್ದರು. | ವಿವಿಧ ಜಾತಿಯ 10 ಗಿಡಗಳನ್ನು ನೆಡಲಾಯಿತು. |

# ಕ್ಯಾನ್ಸರ್ ಪೀಡಿತ ರಾಜ್ಯ ಪಾಲಿಟೆಕ್ನಿಕ್‌ಗಳು

(ಕರಾಳಪತ್ರದ ಅಂಕಿಅಂಶಗಳನ್ನು ೧೯೮೦ - ೮೫ರಲ್ಲಿದ್ದಂತೆ ಎಂದು ಪರಿಗಣಿಸಬೇಕಾಗಿ ಕೋರಿದೆ - ಸಂ)

ಪಾಲಿಟೆಕ್ನಿಕ್‌ಗಳಲ್ಲಿ ಬೋಧಕ ವಿದ್ಯಾರ್ಥಿಗಳ ಪ್ರಮಾಣ 1985-86ರಲ್ಲಿ, 1:15 ಎಂದು ಶಿಕ್ಷಣ ಇಲಾಖೆಯ ವಾರ್ಷಿಕ ವರದಿ 1985-86 ತಿಳಿಸುತ್ತದೆ. ಆದರೆ ಬೆಂಗಳೂರಿನಲ್ಲಿ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ವಿದ್ಯಾರ್ಥಿನಿ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷೀಯ ಭಾಷಣದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕ ಶ್ರೀ ಡಿ. ಕೆ. ಸತ್ಯನಾರಾಯಣ ಶೆಟ್ಟಿ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಶೇಕಡಾ 30 ರಿಂದ 40ರಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಬಿದ್ದಿವೆ ಎಂದು ಹೇಳಿದ್ದಾರೆ. (ಪ್ರಜಾವಾಣಿ ದಿನಪತ್ರಿಕೆ ವರದಿ 9-9-86 ಹಾಗೂ 10-9-86ರ ಸಂಪಾದಕೀಯ) ಅಧ್ಯಾಪಕರ ಸಂಖ್ಯೆ ಬಗ್ಗೆ ಶಿಕ್ಷಣ ಇಲಾಖೆಯ ವರದಿ ಮತ್ತು ಅದೇ ಇಲಾಖೆಯ ನಿರ್ದೇಶಕರ ಮಾತುಗಳಲ್ಲಿನ ಅಂತರ ಸರ್ಕಾರಿ ವರದಿಯ ಪೊಳ್ಳುತನ ಬಯಲು ಮಾಡುವುದಲ್ಲದೇ ಸಮಸ್ಯೆಯ ಇನ್ನೊಂದು ಗಂಭೀರ ಮುಖದೆಡೆಗೆ ಬೊಟ್ಟು ಮಾಡುತ್ತದೆ. ಗುತ್ತಿಗೆ ಅಧ್ಯಾಪಕರನ್ನು ನೇಮಿಸುತ್ತಿರುವುದರಿಂದ ಇಡೀ ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ವರ್ಷದ ಮಧ್ಯದಲ್ಲಿಯೇ ಅಧ್ಯಾಪಕರು ಕೆಲಸ ಬಿಡುತ್ತಿರುವುದು, ತಮ್ಮ ಮನೋ ಇಚ್ಛೆಯಂತೆ ಪಾಠ ಮಾಡುವುದು ಆಗುತ್ತಿದೆ. ವೃತ್ತಿ ಶಿಕ್ಷಣದ ವಿದ್ಯಾರ್ಥಿಗಳು ಅಧ್ಯಾಪನದ ಈ ರೀತಿಯ ಅನಿಶ್ಚಿತತೆಯಿಂದ ವರ್ಷವಿಡೀ ಗೋಳಾಡುತ್ತಾರೆ.




ಶೇಕಡಾ 40 ರಷ್ಟು ಬೋಧಕರ ಕೊರತೆಯಿದ್ದೂ ಇಂದಿನ ತಾಂತ್ರಿಕ ಶಿಕ್ಷಣದ ಸರ್ಕಸ್ ನಡೆಯುತ್ತಿರುವುದು ತಾಂತ್ರಿಕ ಕ್ಷೇತ್ರದ ಭವಿಷ್ಯ ಎಂತಹ ಅಪಾಯಕರ ಸ್ಥಿತಿಯನ್ನು ತಲುಪಿದೆ ಎನ್ನುವುದಕ್ಕೆ ದಿಕ್ಸೂಚಿ; ಬೋಧಕರಿಲ್ಲ ಎನ್ನುವುದೊಂದು ಕ್ಷುಲ್ಲಕ ಸಮಸ್ಯೆಯಲ್ಲ. ಒಂದು ಸರಕಾರೀ ಕಛೇರಿಯಲ್ಲಿ ಕೆಲವು ಗುಮಾಸ್ತರ ಹುದ್ದೆ ಖಾಲಿ ಇರುವುದಕ್ಕೂ, ತರಗತಿಯಲ್ಲಿ ಪಾಠ ಹೇಳಲು ಬೋಧಕರಿಲ್ಲದೇ ವಿದ್ಯಾರ್ಥಿಗಳು ಖಾಲಿ ಸಮಯ ಎದುರಿಸುತ್ತ ಶಿಕ್ಷಣ ಬೋಧನಾ ಪ್ರಕ್ರಿಯೆ ಸ್ಥಗಿತಗೊಳ್ಳುವುದಕ್ಕೂ ಬಹು ದೊಡ್ಡ ವ್ಯತ್ಯಾಸವಿದೆ. ಅಧ್ಯಾಪನ ಇಲ್ಲದೇ ಹೇಗೋ ವರ್ಷ ಮುಗಿಸಿ ಪರೀಕ್ಷೆಗೂ ಹಾಜರಾಗಿ ಪದವಿ ಪಡೆಯುವುದು ನಡೆದೇ ಹೋಗುತ್ತಿದೆ. ತಾಂತ್ರಿಕ ಪರಿಣಿತರನ್ನು ತಯಾರಿಸಬೇಕಾದ ಬುನಾದಿ ಹಂತದಲ್ಲೇ ದೇಶದ ತಂತ್ರಜ್ಞಾನ, ತಾಂತ್ರಿಕ ಮಾನವ ಶಕ್ತಿಗೆ ಎರಗಿರುವ ಇಂಥ ಅಪಾಯವನ್ನು ಇಲ್ಲಿ ಗಮನಿಸಿದರೆ ಭಯವಾಗುತ್ತದೆ.

**ಪರೀಕ್ಷೆ-ಫಲಿತಾಂಶಗಳ ಕುಸಿತ:** ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಶಿಕ್ಷಣ ದೊರೆಯದಿದ್ದರೂ ಪರೀಕ್ಷೆಗಳನ್ನು ಅಲ್ಲಿಯ ವಿದ್ಯಾರ್ಥಿಗಳು ಎದುರಿಸಬೇಕಾಗಿದೆ. ಪರೀಕ್ಷಾ ಅವ್ಯವಹಾರಗಳು ತಾಂಡವವಾಡಿದರೂ ಪರೀಕ್ಷಾ ಫಲಿತಾಂಶಗಳಲ್ಲಿ ಆಗಿರುವ ಇಳಿಮುಖ ಶಿಕ್ಷಣದ ನೀತಿ ನಿರೂಪಿಸುವವರಿಗೆ ಕಣ್ತೆರೆಸುವಂತಿದೆ.

1983 ಮತ್ತು 1984ರ ವಾರ್ಷಿಕ ಪರೀಕ್ಷೆಗಳ ಫಲಿತಾಂಶಗಳು:
1: ಮೊದಲ ವರ್ಷದ ಡಿಪ್ಲೊಮಾ, ಹಾಜರು- 8541 (9121), ತೇರ್ಗಡೆ -3727 (5096), ಶೇಕಡಾವಾರು ತೇರ್ಗಡೆ -43.6 (55.9)
2: ಎರಡನೇ ವರ್ಷದ ಡಿಪ್ಲೋಮಾ, ಹಾಜರು-7184 (6547), ತೇರ್ಗಡೆ-3326 (4577), ಶೇಕಡಾವಾರು 46.30 (69.90)
3: ಮೂರನೇ ವರ್ಷದ ಡಿಪ್ಲೋಮಾ ಹಾಜರಿ - 5958 (5264), ತೇರ್ಗಡೆ -2860 (3888), ಶೇಕಡಾವಾರು ತೇರ್ಗಡೆ 48.0 (73.90). ಆವರಣ ಚಿಹ್ನೆಯೊಳಗಿನ ಸಂಖ್ಯೆಗಳು 1983ರ ಅಂಕಿ ಅಂಶಗಳು. ಉಳಿದವು 1984ರವು. (ತಾಂತ್ರಿಕ ಶಿಕ್ಷಣ ಇಲಾಖೆಯ ವರದಿ 1984-85 ಪುಟ 28 ಮತ್ತು 29)

1984ರ ಪರೀಕ್ಷೆಯಲ್ಲಿ ಹಾಜರಾದ ಮತ್ತು ತೇರ್ಗಡೆಯಾದ ಸಂಖ್ಯೆಯ ಶೇಕಡವಾರು ವ್ಯತ್ಯಾಸ (1981ರ ಪರೀಕ್ಷೆಯೊಡನೆ ಹೋಲಿಸಿದಾಗ)

ಪರೀಕ್ಷೆ ಮಟ್ಟ; ಪ್ರಥಮ ವರ್ಷದ ಡಿಪ್ಲೊಮಾ, +2.12, -14.29, ದ್ವಿತೀಯ ವರ್ಷದ ಡಿಪ್ಲೊಮಾ; +12.94, -12.59, ತೃತೀಯ ವರ್ಷದ ಡಿಪ್ಲೊಮಾ; +10.91, -21.70
1983-84ರಲ್ಲಿ 5341 ವಿದ್ಯಾರ್ಥಿಗಳು ಡಿಪ್ಲೊಮಾದಲ್ಲಿ ತೇರ್ಗಡೆಯಾಗಿದ್ದರೆ 1985-86ರಲ್ಲಿ 5124ಕ್ಕೆ ಈ ಸಂಖ್ಯೆ ಕುಸಿದಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ವರದಿ (1984-85) ಯಲ್ಲಿ ಹೇಳುವಂತೆ ಈ ಇಳಿತಾಯಕ್ಕೆ ಕಾರಣ "ಖಾಸಗೀ ಸಂಸ್ಥೆಗಳಲ್ಲಿ ಅರ್ಹತೆಯ ಪರೀಕ್ಷೆಗಳಲ್ಲಿ ಶೇಕಡಾವಾರು ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಂಡ ಕಾರಣ ತೇರ್ಗಡೆಯ ಪ್ರಮಾಣ ಕಡಿಮೆಯಾಗಿದೆ". ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪ್ರಿಯವಾದ 'ಪ್ರತಿಭೆಯ ರಫ್ತುವಾದ' ಎಲ್ಲಿ ಮಾಯವಾಯಿತು ಎಂದು ಅವರು ಹೇಳಬೇಕಷ್ಟೆ. ಈ ವಿಧದ ಪ್ರತಿಭೆಯನ್ನು ರಫ್ತು ಮಾಡುವ ಆತುರ ಅವರಿಗಿದೆ ಎಂದಾದರೆ ಈಗಾಗಲೇ ಕ್ಯಾಪಿಟೇಶನ್ ಶುಲ್ಕದ ಅಪಕೀರ್ತಿ ಪಡೆದ ಕರ್ನಾಟಕಕ್ಕೆ ಕಳಪೆ ಡಿಪ್ಲೊಮಾಧರರನ್ನು ದೇಶಕ್ಕೆ ನೀಡಿದ 'ಹೆಮ್ಮೆಯೂ' ಸೇರುತ್ತದೆ.

ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ "ಕೈಗಾರಿಕೆಯ ಹಾಗೂ ತೋಟಗಾರಿಕೆಯ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆರಂಭ ಮಾಡಲಾಗುವುದು" ಎಂದಿದ್ದ ಜನತಾ ಪಕ್ಷ ಆಡಳಿತಕ್ಕೆ ಬಂದ ಮೇಲೆ ಈ ಕುರಿತು ಸಂಪೂರ್ಣ ನಿರ್ಲಕ್ಷ ತಾಳಿದೆ.

ಸರ್ಕಾರದಿಂದ ನೇಮಿತವಾದ ಕೆಲವು ವಿಶೇಷಾಧಿಕಾರಿಗಳು ನಡೆಸಿದ ಬಿಗಿಯಾದ ಪರೀಕ್ಷೆಗಳನ್ನು ಖಾಸಗಿ ಪಾಲಿಟೆಕ್ನಿಕ್ ಗಳು ಸಹಿಸದೇ, ಈ ಕಾರಣವನ್ನು ನೇರವಾಗಿ ಕೊಡದೇ ಹಾಗೂ ಇಳಿಮುಖವಾಗುವ ಫಲಿತಾಂಶ ಸರಿಪಡಿಸಲು 'ನಾವೇ ಪರೀಕ್ಷೆಗಳನ್ನು ಮಾಡುತ್ತೇವೆ. ಸರ್ಕಾರಿ ವಿಶೇಷಾಧಿಕಾರಿಗಳು ಬೇಡ" ಎಂಬ ಬೇಡಿಕೆಯನ್ನು KUPA (Karnataka State Unaided Polytechnic Association) ಮೂಲಕ ಕೇಳುತ್ತಿದ್ದಾರೆ. ಪರೀಕ್ಷೆಗೆ ಹಾಜರಾಗುವವರ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಲಿದೆ. ಆದರೆ ಪರೀಕ್ಷೆ ವಿಭಾಗದಲ್ಲಾಗಲೀ ಅಥವ ತಾಂತ್ರಿಕ ನಿರ್ದೇಶನಾಲಯದಲ್ಲಾಗಲೀ ಖಾಲಿ ಇರುವ ಸಿಬ್ಬಂದಿಯನ್ನು ಇನ್ನೂವರೆಗೆ ತುಂಬದೇ ಇರುವುದರಿಂದ ಹಾಗೂ ಅನೇಕ ಪಾಲಿಟೆಕ್ನಿಕ್‌ಗಳು ಪರೀಕ್ಷೆಯ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ವರದಿ ಮಾಡಿಕೊಳ್ಳುತ್ತಿರುವುದರಿಂದ ಪರೀಕ್ಷಾ ನಿಯಂತ್ರಣ ತಪ್ಪಿ ಹೋಗುತ್ತದೆ. (ಉದಾ : 1986-87ರ ಆರಂಭದಲ್ಲಿ ವರದಿ ಮಾಡಿಕೊಂಡ ಸಂಖ್ಯೆ 157. ಆದರೆ ವರ್ಷಾಂತ್ಯದಲ್ಲಿ ಪರೀಕ್ಷಾ ಕೇಂದ್ರಗಳ ಸಂಖ್ಯೆ 167) ಇದರಿಂದ ಪ್ರತಿವರ್ಷ ಫಲಿತಾಂಶ ತಡವಾಗಿಯೇ ಹೊರಬೀಳುತ್ತದೆ. ಶೈಕ್ಷಣಿಕ ವರ್ಷ, ಒಟ್ಟು ಪಾಲಿಟೆಕ್ನಿಕ್ ಶಿಕ್ಷಣ ಗೊತ್ತು ಗುರಿಯಿಲ್ಲದೆ ಯಾವಾಗೋ ಶುರುವಾಗಿ ನಡೆದು ಮುಕ್ತಾಯಗೊಳ್ಳುವ ವಿದ್ಯಾಭ್ಯಾಸ ಕ್ರಮವಾಗಿ ಪರಿಣಮಿಸಿದೆ.

ಮೇಲಿನಂಶಗಳಿಂದ ಒಂದು ಅತ್ಯಂತ ವಿಚಿತ್ರ ಆದರೂ ಕಟುವಾದ ಸತ್ಯದ ಸಂಗತಿ ಗೋಚರವಾಗುತ್ತದೆ. ಹೆಚ್ಚು ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರ ಅನುಮತಿಯಿತ್ತಿರುವುದು ಹೆಚ್ಚು ಜನ ಡಿಪ್ಲೊಮಾಧರರಾಗಲೆಂದು. ಆದರೆ ಕೇವಲ ಹಣದಾಸೆಯಿಂದ ಪ್ರೇರಿತರಾದ ಜನ ಯಾವುದೇ ಸೌಲಭ್ಯ-ಸಂರಚನೆಗಳಿಲ್ಲದೇ ಈ ಸಂಸ್ಥೆಗಳನ್ನು ಶುರು ಮಾಡಿರುವುದರಿಂದ ಅಲ್ಲಿ ತಂತ್ರಜ್ಞಾನದ ಶಿಕ್ಷಣವೂ ಇಲ್ಲ ಮತ್ತು ಡಿಪ್ಲೊಮಾಧರರ ಸಂಖ್ಯೆಯೂ ಕುಸಿದು ಬೀಳುತ್ತಿದೆ. ಗುರಿಯೊಂದಿಗೆ ದಾರಿ ಸರಿಯಾಗಿದ್ದರೆ ಮಾತ್ರ, ಶಿಕ್ಷಣ ಬೆಳಗುತ್ತದೆಯೇ ಹೊರತು ಶ್ರೀ ಹೆಗಡೆಯವರ ವಿಪರೀತ ಚಾಣಾಕ್ಷತೆ ಮತ್ತು ವಿತಂಡವಾದದಿಂದ ಶಿಕ್ಷಣ ಬೀಳುತ್ತದೆ. ರಾಜಕೀಯ ಹಿತಾಸಕ್ತಿ ಪ್ರೇರಿತ ಎನ್ನುವುದಕ್ಕೆ ಮೇಲಿನದು ಒಂದು ಉದಾಹರಣೆ ಮಾತ್ರ.

(ಮುಂದುವರಿಯುವುದು) ◆

# ಕಲಬುರಗಿಯ ಅದಮ್ಯಚೇತನದ ಚಟುವಟಿಕೆಗಳ ವರದಿ




**ಕಲಬುರಗಿಯಲ್ಲಿ "ಅನಂತ ಪ್ಲೇಟ್ ಬ್ಯಾಂಕ್":** ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ನಿರುತ್ತೇಜಿಸುವ ಉದ್ದೇಶದಿಂದ ಅದಮ್ಯ ಚೇತನ ಸಂಸ್ಥೆ ಮತ್ತು ಕಲಬುರಗಿಯ ಸ್ವಾಭಿಮಾನಿ ಸ್ವದೇಶಿ ಮಳಿಗೆಗಳ ಸಂಯುಕ್ತ ಆಶ್ರಯದಲ್ಲಿ "ಅನಂತ ಪ್ಲೇಟ್ ಬ್ಯಾಂಕ್" ಚಾಲನೆಗೊಂಡಿತು.

ದಿನಾಂಕ 15-07-2024 ರಂದು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, "ಅದಮ್ಯ ಚೇತನ ಸಂಸ್ಥೆಯು ಸುಮಾರು 10 ವರ್ಷಗಳಿಂದ ಪರಿಸರದ ಒಳಿತಿಗಾಗಿ ಪ್ಲೇಟ್ ಬ್ಯಾಂಕ್ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿದೆ. ಬೆಂಗಳೂರೂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಸಂಘಸಂಸ್ಥೆಗಳು, ಮಠಗಳು, ಶಾಲಾ ಕಾಲೇಜುಗಳು ಈ ಪ್ಲೇಟ್ ಬ್ಯಾಂಕಿನ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಈ ಯೋಜನೆಯಿಂದ ಪರಿಸರದಲ್ಲಿ ಉಂಟಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾಕಷ್ಟು ಮಟ್ಟಿಗೆ ತಡೆಯಲು ಸಾಧ್ಯವಾಗಿದೆ. ಏಕಬಳಕೆಯ ಪ್ಲಾಸ್ಟಿಕ್ ನಿಂದ ಪರಿಸರ ಹಾಳಾಗುವುದರ ಜೊತೆಗೆ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತವೆ. ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಬಿಟ್ಟು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ" ಎಂದು ಹೇಳಿದರು. ಕಲಬುರಗಿಯನ್ನು ಕಸಮುಕ್ತವಾಗಿಸಲು ನಗರದ ಎಲ್ಲ ಪರಿಸರ ಪ್ರೇಮಿಗಳು ಈ ಉಚಿತ ಪ್ಲೇಟ್ ಬ್ಯಾಂಕ್ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಅದಮ್ಯ ಚೇತನ ಟ್ರಸ್ಟಿ, ಶ್ರೀ ಪ್ರದೀಪ್ ಓಕ್ ಮಾತನಾಡಿ, ಯೋಜನೆಯ ವಿವರಗಳನ್ನು ನೀಡಿದರು. ಕಲಬುರಗಿ ಮಹಾನಗರಪಾಲಿಕೆಯ ಮೇಯರ್, ಶ್ರೀ ವಿಶಾಲ ದರ್ಗಿ ಮಾತನಾಡಿ ಅದಮ್ಯ ಚೇತನದ ಸಂಸ್ಥೆಯ ಚಟುವಟಿಕೆಗಳನ್ನು ಶ್ಲಾಘಿಸಿದರು. ಮುಂದಿನ ದಿನಗಳಲ್ಲಿ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಪ್ರೊ. ದೇವ ಸುಧಾಕರ ಪಾಟೀಲ್, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ದಯಾಘನ್ ಧಾರವಾಡ್ಕರ್ ಮತ್ತು ಡಾ. ಗುರುರಾಜ್ ದೇಶಪಾಂಡೆ ವೇದಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು. ಇವರ ಜೊತೆಗೆ ಮುರಳೀಧರರಾವ ಕರಲಗಿಕರ್, ಸ್ವಾಭಿಮಾನಿ ಸ್ವದೇಶಿ ಮಳಿಗೆಯ ಮಾಲಿಕರಾದ ಅಕ್ಷಯ್ ಕುಲಕರ್ಣಿ, ಪ್ರಭು, ಅನಿಲ್ ತಂಬಾಕೆ, ಪ್ರಮೋದ್ ದೇಶಪಾಂಡೆ, ಶ್ರೀರಾಮ್ ಗೆಳೆಯರ ಬಳಗದ ಸದಸ್ಯರು, ಭಾಗವಹಿಸಿದರು.

**ಕಲಬುರಗಿಗೆ ವಿಸ್ತರಿಸಿದ "ನಿತ್ಯ ಅನ್ನದಾನ":** ಅದಮ್ಯ ಚೇತನ ಸಂಸ್ಥೆಯ "ನಿತ್ಯ ಅನ್ನದಾನ" ಕಾರ್ಯಕ್ರಮವನ್ನು ಕಲಬುರಗಿಗೂ ವಿಸ್ತರಿಸಲಾಗಿದೆ. ಬಸವೇಶ್ವರ ಆಸ್ಪತ್ರೆಯ ಬಳಿ ನಿತ್ಯ ಅನ್ನದಾನ ಕೇಂದ್ರಕ್ಕೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಚಾಲನೆ ನೀಡಿದರು. ನಗರದ ಬಸವೇಶ್ವರ ಆಸ್ಪತ್ರೆ, ಇ. ಎಸ್. ಐ. ಆಸ್ಪತ್ರೆಗೆ ಬರುವ ರೋಗಿಗಳಿಗೆ ಹಾಗೂ ಅವರ ಸಹಾಯಕರಿಗೆ ಈ ಕೇಂದ್ರ ಉಪಯುಕ್ತವಾಗಿದೆ.

**ಕಲಬುರಗಿಯಲ್ಲಿ "ಸಸ್ಯಾಗ್ರಹ" ಅಭಿಯಾನ:** "ಸಸ್ಯಾಗ್ರಹ" ಎಂಬುದು ಅದಮ್ಯಚೇತನ ಸಂಸ್ಥೆಯ ಪ್ರಮುಖ ಯೋಜನೆ. ಇದನ್ನು 2016 ರಲ್ಲಿ ಶ್ರೀ ಅನಂತಕುಮಾರ್ ಪ್ರಾರಂಭಿಸಿದರು. ಹೆಚ್ಚಾಗಿ ಬೆಂಗಳೂರಿನಲ್ಲಿಯೇ ನಡೆಯುತ್ತಿದ್ದ ಈ ಪರಿಸರ ಜಾಗೃತಿ ಮೂಡಿಸುವ ಅಭಿಯಾನವನ್ನು ಕಲಬುರಗಿ ನಗರದ ಸರ್ವಜ್ಞ ಪಿಯು ಕಾಲೇಜಿನ ಹಿಂಭಾಗದಲ್ಲಿರುವ ಸಾಯಿರಾಂ ಕಾಲೋನಿ ಉದ್ಯಾನವನದಲ್ಲಿ ಗಿಡ ನೆಡುವ ಕಾರ್ಯಕ್ರಮದ ಮೂಲಕ ಕಲಬುರಗಿಗೂ ವಿಸ್ತರಿಸಲಾಯಿತು. ಜುಲೈ 15, 2024 ರಂದು ಕಲಬುರಗಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಚಾಲನೆ ನೀಡಿದರು. ಕಾರ್ಯಕ್ರಮದ ಕುರಿತು ಮಾತನಾಡಿದ ತೇಜಸ್ವಿನಿ ಅನಂತಕುಮಾರ್, "ಹಸಿರು ಹೆಚ್ಚಿಸುವ ಮೂಲಕ ಪರಿಸರ ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರಿಗೂ ಇದೆ. ಅದರಲ್ಲಿಯೂ ವಿಶೇಷವಾಗಿ ಕಲಬುರಗಿ ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಮೆಂಟ್ ಕಾರ್ಖಾನೆಗಳಿರುವುದರಿಂದ ವಾಯುಮಾಲಿನ್ಯ ಹೆಚ್ಚಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಕಲಬುರಗಿಯಲ್ಲಿ ಸಸ್ಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಈಗಾಗಲೇ ಕ್ರಿಯಾಶೀಲರಾಗಿರುವ ಯುವ ಉತ್ಸಾಹಿಗಳ ತಂಡಗಳ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭಾಗವಹಿಸಬೇಕು" ಎಂದು ಹೇಳಿದರು.

ಅದಮ್ಯ ಚೇತನದ ಟ್ರಸ್ಟಿ, ಶ್ರೀ ಪ್ರದೀಪ ಓಕ್, ಪ್ರೊ. ದೇವಸುಧಾಕರ್ ಪಾಟೀಲ್, ಪ್ರಮೋದ್ ದೇಶಪಾಂಡೆ, ನಾರಾಯಣ ಜಾಗಿರದಾರ, ಶ್ವೇತಾ ಸರಾಫ್, ಪ್ರಸಾದ್ ಜೋಶಿ ಮೊದಲಾದ ಗಣ್ಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸರ್ವಜ್ಞ ಕಾಲೇಜು ಮತ್ತು ಪಿಡಿಎ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮದಲ್ಲಿ ಅನೇಕ ಗಿಡಗಳನ್ನು ನೆಟ್ಟರು.

**ಭಾಗ್ಯವಂತಿ ನಗರದಲ್ಲಿ 'ಸಸ್ಯಾಗ್ರಹ':** ಕಲಬುರಗಿ ನಗರದ ಆಮಂತ್ರಣ ಹೋಟೆಲ್ ಹಿಂಭಾಗದಲ್ಲಿರುವ ಭಾಗ್ಯವಂತಿ ನಗರದ ಉದ್ಯಾನವನದಲ್ಲಿ ಅದಮ್ಯ ಚೇತನ ಸಂಸ್ಥೆಯ "ಸಸ್ಯಾಗ್ರಹ" ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದಲ್ಲಿ ಅದಮ್ಯ ಚೇತನದ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಪ್ರದೀಪ್ ಓಕ್, ಪ್ರೊ. ದೇವಸುಧಾಕರ್ ಪಾಟೀಲ್, ಶ್ರೀ ತ್ರಿವಿಕ್ರಮ್ ಜೋಶಿ, ಪ್ರಕಾಶ್ ಎನ್, ಶಾರದಾ ಪ್ರಕಾಶ್, ಶ್ರೀ ಅಶೋಕ್ ರೆಡ್ಡಿ ಮೊದಲಾದ ಗಣ್ಯರ ಜೊತೆಗೆ ಅನೇಕ ಸ್ಥಳೀಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿವಿಧ ಬಗೆಯ ಅನೇಕ ಗಿಡಗಳನ್ನು ನೆಡಲಾಯಿತು. ◆



## ಶ್ರದ್ಧಾಂಜಲಿ

**ಅನಂತಕುಮಾರ್ ಪ್ರತಿಷ್ಠಾನದ ಉದ್ಯೋಗಿವೃಂದಕ್ಕೆ ಸೇರಿ, ಅನಂತಪಥ ಮಾಸಪತ್ರಿಕೆಯ ಸಹಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ವೆಂಕಟೇಶ ಮಾನು (೫೫) ಅವರು ಅಲ್ಪಕಾಲದ ಅಸ್ವಸ್ಥತೆಯ ನಂತರ ದಿನಾಂಕ ೧೨ ಜುಲೈ ೨೦೨೪ರಂದು ನಿಧನರಾದರು.**

**ಪತ್ರಿಕಾರಂಗದ ಸೇವೆಯಲ್ಲಿ ಹಲವಾರು ವರ್ಷಗಳ ಅನುಭವವಿದ್ದ ವೆಂಕಟೇಶ ಮಾನು, ಕಳೆದ ಒಂದು ವರ್ಷದಿಂದ ಅನಂತಪಥ ಮಾಸಪತ್ರಿಕೆಗೆ ಲೇಖನ, ವರದಿ, ಟಿಪ್ಪಣಿಗಳನ್ನು ಸಿದ್ಧಪಡಿಸುವುದಲ್ಲದೆ, ಅನಂತ ಪ್ರೇರಣಾ ಕೇಂದ್ರದ ಪ್ರದರ್ಶಿನಿಗಳ ನಿರೂಪಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಸರಳ ಸಜ್ಜನಿಕೆಯ ಪ್ರತಿರೂಪವಾಗಿದ್ದ ಮಾನುರವರ ನಿಧನದಿಂದ ಪ್ರತಿಷ್ಠಾನವು ಪ್ರಾಮಾಣಿಕ, ನಿಷ್ಠಾವಂತ ಉದ್ಯೋಗಿಯೊಬ್ಬರ ಸೇವೆಯನ್ನು ಕಳೆದುಕೊಂಡಂತಾಗಿದೆ. ದಿವಂಗತರಿಗೆ ಅದಮ್ಯಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನಗಳ ಪರವಾಗಿ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ.**

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi** Inputs: **Poornaprazna / ACF / AKP**
Photographs: **Gopal TS / Kengeri Chakrapani / Internet Sources / AKP / ACF** Sketch: **Krishna Murthy KS**
Acknowledgements: **PV Krishna Bhat / Beluru Sudarshana**
Printed at: **Rashtrothana Mudranalaya, Chamarajpet, Bengaluru**
Published by: **Tejaswini Ananthkumar**

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ದಿನಾಂಕ ೦೨/೦೭/೨೦೨೪ ರಂದು ಗ್ರಾಮೀಣ ಮಹಿಳೆಯರ ನಾಯಕತ್ವ ವಿಕಸನಕ್ಕಾಗಿ ಗ್ರಾಮಚೇತನ ಶಿಬಿರವು ನಡೆಯಿತು.



ದಿನಾಂಕ ೧೫/೦೭/೨೦೨೪ರಂದು ಕಲಬುರಗಿಯಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಸ್ವಾಭಿಮಾನಿ ಸ್ವದೇಶಿ ಮಳಿಗೆಯ ಜೊತೆಗೆ ನಡೆದ ಒಡಂಬಡಿಕೆಯ ವಿನಿಮಯದ ಸಂದರ್ಭದ ಚಿತ್ರ.



ಮಹದೇಶ್ವರ ಬೆಟ್ಟದ ಶ್ರೀಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಅದಮ್ಯ ಚೇತನಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸಿ ಪ್ರಶಂಸೆ ವ್ಯಕ್ತಪಡಿಸಿದರು.



ಕಲಬುರಗಿಯ ಬಸವೇಶ್ವರ ಆಸ್ಪತ್ರೆಯ ಎದುರು ನಿತ್ಯ ಅನ್ನದಾನ ಕಾರ್ಯಕ್ರಮ ಪ್ರಾರಂಭವಾಯಿತು.



ಕಲಬುರಗಿ ನಗರದ ಭಾಗ್ಯವಂತಿ ನಗರ ಉದ್ಯಾನವನದಲ್ಲಿ ದಿನಾಂಕ ೧೫/೦೭/೨೦೨೪ರಂದು ನಡೆದ ಸಸ್ಯಾಗ್ರಹ ಕಾರ್ಯಕ್ರಮದ ಚಿತ್ರ



ಶೃಂಗೇರಿ ಶಾರದಾ ಪೀಠದ ೩೬ನೇ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವದ ಅಂಗವಾಗಿ ೪೪೪ನೇ ಹಸಿರು ಭಾನುವಾರ ಕಾರ್ಯಕ್ರಮವು ದಿನಾಂಕ ೩೦/೦೬/೨೦೨೪ರಂದು ಬೆಂಗಳೂರಿನ ಶಂಕರಮಠದ ಆವರಣದಲ್ಲಿ ನಡೆಯಿತು.



ಕಲಬುರಗಿಯ ಸಾಯಿರಾಂ ಕಾಲೋನಿಯ ಉದ್ಯಾನವನದಲ್ಲಿ ದಿನಾಂಕ ೧೫/೦೭/೨೦೨೪ರಂದು ನಡೆದ ಸಸ್ಯಾಗ್ರಹದ ಚಿತ್ರ.

## ಅನಂತ ಚಿತ್ರಸಂಪುಟ

**ಅನಂತಕುಮಾರರ ರಾಜಕೀಯ ಜೀವನಕ್ಕೆ ವಿದ್ಯಾರ್ಥಿ ಪರಿಷತ್ತು ಪ್ರಯೋಗಶಾಲೆಯಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ನಿತ್ಯ ಸಂಚಾರ, ನಿರಂತರ ಪ್ರವಾಸ, ಕಾರ್ಯಕರ್ತರ ಪಡೆಯ ನಿರ್ಮಾಣ,  ಸಾರ್ವಜನಿಕ ಸಂಪರ್ಕ, ಸಂವಹನ, ನಿತ್ಯ ಹೋರಾಟಗಳು ಅವರ ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು**






























